

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

Volume : 07 | Issue : 212 | Thursday 01-05-2025 | E-mail : maruti.b.hosamani76@gmail.com | Page: 4 | Price : Rs. 1/-


# ಸೂಪರ್ ಮಾರುಕಟ್ಟೆ ಕಾಂಪೌಂಡ್, ಪಿಲ್ಲರುಗಳಲ್ಲಿ ಬಿರುಕು – ಕಳಪೆ ಕಾಮಗಾರಿ ಆರೋಪ



**ಸಿಹಿ ಕಹಿ ಸುದ್ದಿ,**

**ಗದಗ :** ಬೆಟಗೇರಿ ಅವಳಿ ನಗರದಲ್ಲಿ ಎರಡು ಮೂರು ದಿನಗಳ ಹಿಂದೆ ಬಿರುಗಾಳಿ ಸಹಿತ ಸುರಿದ ಭಾರೀ ಮಳೆಗೆ ಬೆಟಗೇರಿ ಬಸ್ ನಿಲ್ದಾಣದ ಪಕ್ಕದಲ್ಲಿರುವ ಸೂಪರ್ ಹೈಟೆಕ್ ತರಕಾರಿ ಮಾರುಕಟ್ಟೆಯ ಕಾಂಪೌಂಡ್ ಬಿರುಕು ಬಿಟ್ಟಿದೆ. ಪಿಲ್ಲರಗಳು ಬಿರುಕು ಬಿಟ್ಟುವಾಲಿವೆ. ಅಲ್ಲಿರುವ ನೂರಾರು ಮಂದಿ ತರಕಾರಿ ವ್ಯಾಪಾರಿಗಳು ಆತಂಕ ವ್ಯಕ್ತಪಡಿಸಿ. ಕಳಪೆ ಕಾಮಗಾರಿ ವಿರುದ್ಧ ಆಕ್ರೋಶ ಹೊರ ಹಾಕಿದ್ದಾರೆ.

ನಗರ ಸಭೆ ವತಿಯಿಂದ ಅಂದಾಜು 2? ಕೋಟಿ ರೂ ವೆಚ್ಚದಲ್ಲಿ ಸೂಪರ್ ಹೈಟೆಕ್ ಮಾರುಕಟ್ಟೆ ನಿರ್ಮಾಣ ಮಾಡಿದ್ದು, 120 ವ್ಯಾಪಾರ ಮಳಿಗೆಗಳಿವೆ. ವ್ಯಾಪಾರಸ್ಥರಿಗೆ ಸಾಕಷ್ಟು ಅನುಕೂಲವಾಗಿತ್ತು.

ಇದೀಗ ಮಾರುಕಟ್ಟೆ ಪಿಲ್ಲರುಗಳು ಬಿರುಕು ಬಿಟ್ಟಿರುವುದರಿಂದ ವ್ಯಾಪಾರಸ್ಥರಲ್ಲಿ, ಮಾರುಕಟ್ಟೆಗೆ ಬರುವ ಸಾರ್ವಜನಿಕರಲ್ಲಿ ಆತಂಕ ಮನೆ ಮಾಡಿದೆ.

ಪಿಲ್ಲರ್‌ಗಳಿಗೆಅಳವಡಿಸಲಾದತಗಡುಗಳನ್ನು ಸದ್ಯ ತೆರವು ಗೊಳಿಸಲಾಗಿದ್ದು, ಮಾರುಕಟ್ಟೆ ಸುತ್ತಲೂ ಬ್ಯಾರಿಕೇಡ್ ಅಳವಡಿಸಲಾಗಿದೆ. ತರಕಾರಿ ಮಾರುಕಟ್ಟೆಯಲ್ಲಿ ಆತಂಕದ ವಾತಾವರಣ ಸೃಷ್ಟಿಯಾಗಿದ್ದು ಪಿಲ್ಲರ್‌ಗಳು ಯಾವಾಗ ಕುಸಿದು ಬಿಡುತ್ತವೆ ಎಂಬ ಭಯ ವ್ಯಾಪಾರಸ್ಥರನ್ನು ಕಾಡ ಲಾರಂಭಿಸಿದೆ. ನಗರ ಸಭೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಮಾರುಕಟ್ಟೆ ಉದ್ಘಾಟನೆಯಾಗಿ ಏಳೇ ತಿಂಗಳಿಗೆ ಪಿಲ್ಲರುಗಳು ವಾಲಿವೆ. ತಾತ್ಕಾಲಿಕವಾಗಿ ಪ್ರತಿ ಪಿಲ್ಲರಿಗೂ ತಂತಿಯನ್ನು ಬಿಗಿಯಲಾಗಿದೆ. ಇಷ್ಟು ದೊಡ್ಡ ಮಾರುಕಟ್ಟೆಯ ಕಟ್ಟಡವನ್ನು ಭಾರ ಹೊರುವಷ್ಟು ಪಿಲ್ಲರ್‌ಗಳಲ್ಲಿ ಸಾಮರ್ಥ್ಯ ಇಲ್ಲ. ಸಾಮಾನ್ಯ ಮನೆಗಳಿಗೆ ಇರುವ ಪಿಲ್ಲರ್ ಪ್ರಮಾಣದಲ್ಲಿ ನಿರ್ಮಿಸಲಾಗಿದೆ. ಹೀಗಿದ್ದಾಗ ಭಾರ ಹೊರಲು ಹೇಗೆ ಸಾಧ್ಯ ಇಡೀ ಮಾರುಕಟ್ಟೆಯ ಕಟ್ಟಡವೇ ಕಳಪೆ ಕಾಮಗಾರಿ ಯಾಗಿದೆ ಎನ್ನುತ್ತಿದ್ದಾರೆ ಸ್ಥಳೀಯರು.

ಬಿರುಗಾಳಿ ಸಹಿತ ಮಳೆಗೆ ಬಿರುಕು ಬಿಟ್ಟ ಪಿಲ್ಲರುಗಳು ವಾಲುತ್ತಿರುವುದ ರಿಂದ ಮಾರುಕಟ್ಟೆಯಲ್ಲಿ ತರಕಾರಿ ವ್ಯಾಪಾರಸ್ಥರು ಮಾರುಕಟ್ಟೆಯ ಮುಂದಿನ ಬಯಲು ಜಾಗದಲ್ಲಿ ವ್ಯಾಪಾರ ಮಾಡುತ್ತಿದ್ದು ಮಳೆ ಯಾದರೆ ವ್ಯಾಪಾರ ಮಾಡಲು ತೊಂದರೆ ಆಗುತ್ತದೆ.

ಈ ರೀತಿ ಮಾರುಕಟ್ಟೆ ಕಳಪೆ ಕಾಮಗಾರಿ ಮಾಡಿದ್ದರಿಂದ ಬೀದಿಗೆ ಬಂದಿದ್ದೇವೆ ಎಂದು ವ್ಯಾಪಾರಸ್ಥರು ಹೇಳುತ್ತಾರೆ.

ಗದಗ–ಬೆಟಗೇರಿಯ ಸೂಪರ್ ಹೈಟೆಕ್ ತರಕಾರಿ ಮಾರುಕಟ್ಟೆಯಲ್ಲಿ ಕಾಣಿಸಿ ಕೊಂಡಿರುವ ಬಿರುಕುಗಳು ಕೇವಲ ಕಟ್ಟಡದ ತಾಂತ್ರಿಕ ದೌರ್ಬಲ್ಯವಲ್ಲ, ಅಭಿವೃದ್ಧಿ ಹೆಸರಿನಲ್ಲಿ ನಡೆಯುತ್ತಿರುವ ಅಸ್ಥಿರ ಕಾಮಗಾರಿಗಳ ಕಳಪೆ ಗುಣಮಟ್ಟದ ಸಂಕೇತವೂ ಆಗಿದೆ. ನೂರಾರು ವ್ಯಾಪಾರಿಗಳ ದಿನ ನಿತ್ಯದ ಬದುಕಿಗೆ ಆಧಾರವಾದ

ಈ ಮಾರುಕಟ್ಟೆಯ ಭದ್ರತೆ ಸವಾಲು ಎದುರಿಸುತ್ತಿರುವುದು ಆತಂಕಕಾರಿ. ಸಾರ್ವಜನಿಕ ಹಣದ ಸರಿಯಾದ ಬಳಕೆ, ಕಟ್ಟಡದ ಗುಣಮಟ್ಟದ ಮೇಲ್ವಿಚಾರಣೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ತಕ್ಷಣದ ಕ್ರಮ ಅಗತ್ಯವಾಗಿದೆ. ಬಿರುಗಾಳಿ–ಮಳೆಯೆಂದು ಕಾರಣ ಹೇಳದೆ ಇದನ್ನು ಒಂದು ಎಚ್ಚರಿಕೆ ಎಂದು ಪರಿಗಣಿಸಿ, ಭವಿಷ್ಯದಲ್ಲಿ ಇಂತಹ ಅಪಾಯಗಳು ಉಂಟಾಗದಂತೆ ಕ್ರಮ ಕೈಗೊಳ್ಳ ಬೇಕಾಗಿದೆ.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಎಸ್.ವಿ ಸಂಕನಗೌಡ್ರ.ರೋಣ. ಗದಗ**

# ಮೈಕ್ರೋ ಯೋಜನೆಗೆ ಚಾಲನೆ ನೀಡಿದ ಶಾಸಕ ಹಂಪಯ್ಯ ನಾಯಕ್



**ಸಿಹಿ ಕಹಿ ಸುದ್ದಿ,**

**ಮುಸ್ಕೂರು :** ಮಾನ್ವಿ ವಿಧಾನ ಸಭಾ ಕ್ಷೇತ್ರದ ಮುಸ್ಕೂರು ಕ್ರಾಸ್ ನಿಂದ ಜಗೀರ್ ಪನ್ನೀರ್ ಗ್ರಾಮವನ್ನು ಸಂಪರ್ಕಿಸುವ ಮಾರ್ಗ ಮಧ್ಯದ ಹಳ್ಳಕ್ಕೆ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಮೈಕ್ರೋ ಯೋಜನೆ ಅಡಿಯಲ್ಲಿ 2? ಕೋಟಿ 60 ಲಕ್ಷ ರೂ ವೆಚ್ಚದ ಬಾಕ್ಸ್ ಕಲ್ವರ್ಟ್ ನಿರ್ಮಾಣ ಕಾಮಗಾರಿಗೆ ಮಾನ್ವಿ ವಿಧಾನಸಭಾಕ್ಷೇತ್ರದಮಾನ್ಯಶಾಸಕರಾದಶ್ರೀಹಂಪಯ್ಯ ನಾಯಕ್ ಅವರೊಂದಿಗೆ ಇಂದು ಭೂಮಿ ಪೂಜೆ ನೆರವೇರಿಸಲಾಯಿತು. ಕಾಮಗಾರಿಯನ್ನು ಗುಣಮಟ್ಟ ದೊಂದಿಗೆ, ತ್ವರಿತ ಗತಿಯಲ್ಲಿ ಪೂರ್ಣ ಗೊಳಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಯಿತು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ಶ್ರೀ ಶರಣಯ್ಯ ನಾಯಕ ಗುಡದಿನ್ನಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಅಬ್ದುಲ್ ಗಫೂರ್ ಸಾಬ್, ಶ್ರೀ ಕೆ.ಶಾಂತಪ್ಪ, ಶ್ರೀ ಜಯಣ್ಣ,

ಶ್ರೀ ದೊಡ್ಡಬಸ್ಸಪ್ಪ ಗೌಡ, ಶ್ರೀ ಬಿ.ಕೆ ಅಮರೇಶಪ್ಪ, ಶ್ರೀ ಬಾಲಸ್ವಾಮಿ ಕೊಡ್ಲಿ, ಶ್ರೀ ರುದ್ರಪ್ಪ ಅಂಗಡಿ, ಶ್ರೀ ಖಾಲೀದ್ ಸಾಹೆಬ್, ಶ್ರೀ ರೌಡೂರು ಮಹಾಂತೇಶ ಸ್ವಾಮಿ, ಶ್ರೀ ಸುಭಾಸ್ ನಾಯಕ, ಶ್ರೀ ಹನುಮೇಶ ಮದ್ಲಾಪೂರ, ಶ್ರೀ ಚಂದ್ರಶೇಖರ್ ಕುರ್ಡಿ, ಶ್ರೀ ಬಸವರಾಜ ಪಾಟೀಲ್ ಹತ್ತನೂರ ಸೇರಿದಂತೆ ಅನೇಕರು ಹಾಜರಿದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಹುಸೇನ್.ಭಾಷಾ.ನಕ್ಕುಂದಿ.ಮಾನ್ವಿ**

# ವಿಶ್ವಗುರು ಜಗಜ್ಯೋತಿ ಬಸವಣ್ಣನವರ ಜಯಂತಿ ಆಚರಣೆ



**ಸಿಹಿ ಕಹಿ ಸುದ್ದಿ,**

**ಕೊಟ್ಟೂರು :** ಸಮಾಜ ಸುಧಾರಕ ಲಿಂಗಾಯತ ಧರ್ಮದ ಸ್ಥಾಪಕ ವಚನ ಚಳುವಳಿಯ ಪಿತಾಮಹ ಸಕಲ ಜೀವಿಯನ್ನು ಅಪ್ಪಿ ಕೊಳ್ಳುವ ಮಹಾ ಮಾನವತವಾದಿ ಜಗಜ್ಯೋತಿ ಬಸವೇಶ್ವರರ ಜಯಂತಿ

ಕೊಟ್ಟೂರಿನ ಪಟ್ಟಣ ಪಂಚಾಯಿತಿಯಲ್ಲಿ ಆಚರಣೆ ಮಾಡಲಾಯಿತು. 12 ನೇ. ಶತಮಾನದ ಹಿಂದಿನ ಕಾಲಘಟ್ಟ ದಿಂದ ಕೊಳೆತು ನಾರುತ್ತಿದ್ದ ಸಾಮಾಜಿಕ ವ್ಯವಸ್ಥೆಯನ್ನು ಶುದ್ಧೀಕರಣಗೊಳಿಸಲು ಹೊಸ ಸಾಮಾಜಿಕ ಕ್ರಾಂತಿಯನ್ನು ಹುಟ್ಟು ಹಾಕಿದ್ದ ಸೂರ್ಯ ಬಸವಣ್ಣ. ಜಾತಿ ಮತ ಪಂಥ ಮೇಲು ಕೀಳು ಎಂಬ ಅಸಮಾನತೆಯ ವಿರುದ್ಧ ಹೋರಾಡಿದಂತಹವ್ಯಕ್ತಿಬಸವಣ್ಣ. ಇಂತಹ ಮಹಾನ್ ನಾಯಕರು ಹುಟ್ಟಿದ ಭೂಮಿ ನಮ್ಮದು. ಆದರೆ ಇತ್ತೀಚಿನ ಸಮಾಜದಲ್ಲಿ ಕೇವಲ ಬಸವಣ್ಣ ಲಿಂಗಾಯಿತರು ಅಂಬೇಡ್ಕರ್ ಮಾದಿಗರು ಸಂಗೊಳ್ಳಿ ರಾಯಣ್ಣ ಕುರುಬರು ಇದೇ ತರಹ ಅನೇಕ ಮಹಾನ್ ವ್ಯಕ್ತಿಗಳ ಜಯಂತಿಯನ್ನು ಒಂದೇ ಜಾತಿಗೆ ಸೀಮಿತವಾಗಿ ಬಿಟ್ಟಿದ್ದೆ. ಆದರೆ ಇವರ ಆದರ್ಶ ಮಾತ್ರ ಮನುಷ್ಯನ ಜೀವಕ್ಕೆ ಅವಶ್ಯಕತೆ ಎಂಬುದನ್ನು ಮರೆತು ಇತ್ತೀಚಿಗೆ ಸ್ನೇಹಿತನೊಬ್ಬ ನಗರದಲ್ಲಿ ಮನೆ ಹುಡುಕಾಡುವಾಗ ಜಾತಿಯ ಕಾರಣದಿಂದ ಮನೆ ಸಿಗದೇ ಅನುಭವಿಸಿದ್ದ ಯಾತನೆಯನ್ನು ಕೇಳುವಾಗ, ಇತ್ತೀಚಿಗೆ ಕೊಪ್ಪಳದ ಗ್ರಾಮದ ಒಂದರಲ್ಲಿ ಬಾಲಕನೊಬ್ಬ ದೇವಸ್ಥಾನ ಪ್ರವೇಶಿಸಿದ್ದಕ್ಕೆ ಅಪವಿತ್ರ ವಾಗಿದೆಯಂತೆ ಎಂದು ಸವರ್ಣಿಯರು ಸೇರಿ ಬಾಲಕನ ಪಾಲಕರಿಗೆ ಛೀಮಾರಿ ಹಾಕಿ ದಂಡ ವಿಧಿಸುವಾಗ,

ಕಳೆದ ಕೆಲವು ವರ್ಷಗಳ ಹಿಂದೆ ರಾಜಸ್ಥಾನದ ಗ್ರಾಮ ಒಂದು ಶಾಲೆಯಲ್ಲಿ ದಲಿತ ಬಾಲಕನೊಬ್ಬ ನೀರಿನ ಹೂಜಿಯನ್ನು ಮುಟ್ಟಿದ್ದಕ್ಕಾಗಿ ಶಿಕ್ಷಕನೇ ಬಾಲಕನನ್ನು ಥಳಿಸಿ ಕೊಂದದ್ದು ಕೇಳಿದಾಗ ಕರುಳು ಹಿಂಡುತ್ತದೆ. ಇಂತಹ ಅನೇಕ ಘಟಕಗಳು ಇನ್ನೂ ನಮ್ಮ ಸಮಾಜದಲ್ಲಿ ನಡೆಯುತ್ತಿರುವುದು ಕೆಲ ಮನಸ್ಸುಗಳಿಗೆ ನೋವಾಗುತ್ತದೆ.

ಇದಕ್ಕಾಗಿಯೇ 12 ನೇ. ಶತಮಾನದಲ್ಲಿಯೇ ಇಂತಹ ಘಟನೆ ನಡೆಯ ಬಾರದೆ–ಂದು ಎಲ್ಲರೂ ಸಮಾನದಿಂದ ಕಾಣಬೇಕೆಂದು ಅನೇಕ ವಚನಗಳ ಮೂಲಕ ತಿಳಿಸಿ ಸಾರಿದ್ದು ಇಂದಿನ ಜನತೆ ಅರಿತು ಕೊಳ್ಳಬೇಕಾಗಿದೆ ಎಂದು ಬದ್ದಿ ಮರಿಸ್ವಾಮಿ ಡಿಎಸ್‌ಎಸ್ ಜಿಲ್ಲಾ ಸಂಚಾಲಕರು ತಿಳಿಸಿದರು.

ಈ ಸಂದರ್ಭದಲ್ಲಿ ಬದ್ದಿ ರೇಖಾ ರಮೇಶ್ ಪಟ್ಟಣ ಪಂಚಾಯಿತಿ ಅಧ್ಯಕ್ಷರು,ಸಿದ್ದೇಶಪ್ಪಉಪಾಧ್ಯಕ್ಷರು ಪಟ್ಟಣ ಪಂಚಾಯಿತಿ. ಎ.ನಸರುಲ್ಲಾಪಟ್ಟಣಪಂಚಾಯಿತಿ ಮುಖ್ಯ ಅಧಿಕಾರಿಗಳು ಪಟ್ಟಣ ಪಂಚಾಯತಿಯ ಕೆಲ ಸದಸ್ಯರು ಹಾಗೂ ಮತ್ತಿತರು ಹಾಗೂ ಪಟ್ಟಣ ಪಂಚಾಯತಿ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್. ಕೆ ನ್ಯೂಸ್ ಕನ್ನಡ ಚಾನಲ್: ಪ್ರದೀಪ್. ಕುಮಾರ್.ಸಿ. ಕೊಟ್ಟೂರು**

# ಯಲಗೋಡದಲ್ಲಿ ಬಸವಣ್ಣನವರ – ಜಯಂತಿ ಆಚರಣೆ



**ಸಿಹಿ ಕಹಿ ಸುದ್ದಿ,**

**ಯಲಗೋಡ :** ದೇವರ ಹಿಪ್ಪರಗಿ ತಾಲ್ಲೂಕಿನ ಯಲಗೋಡ ಗ್ರಾಮದಲ್ಲಿ ಬಸವಣ್ಣನವರ ಸರ್ಕಲ್ ನಲ್ಲಿ ವಿಶ್ವ ಗುರು ಜಗಜ್ಯೋತಿ ಬಸವಣ್ಣನವರ ಜಯಂತಿಯನ್ನು ಯಲಗೋಡ ಗ್ರಾಮದಲ್ಲಿ ಅದ್ದೂರಿಯಿಂದ ಆಚರಣೆ ಮಾಡಿದರು ಈ ಸಂದರ್ಭದಲ್ಲಿ ತಾಲ್ಲೂಕಿನ ಜೆಡಿಎಸ್ ಅಧ್ಯಕ್ಷರಾದ ಸಾಯಬಣ್ಣ ಬಾಗೇವಾಡಿ, ಹಾಗೂ ಊರಿನ ರಾಜಶೇಖರ ಸ್ವಾಮೀಜಿ ಯವರು, ಪ್ರಮುಖತರಾದ ಉಮೇಶ್ ಇಂಗಳಗಿ ಸಿದ್ದಪ್ಪ ಬಡಿಗೇರ, ರವಿ ಗಾ–ಣಗೇರೆ ಡಾ, ಮುತ್ತು ಬ್ಯಾಕೋಡ ಡಾ, ಚಿದಾನಂದ ಶಾಸ್ತ್ರಿ ಸೋಮನಗೌಡ ಪಾಟೀಲ, ಪರಶುರಾಮ ಗುಬ್ಬೇವಾಡ ಮಶ್ಯಾಕಸಾಬ ಚೌದ್ರರೆ,ಸೋಮಶೇಖರ್ ಹೋಸಮನಿ ಹಾಗೂ ಗ್ರಾಮದ ಎಲ್ಲಾ ಸಾರ್ವಜನಿಕರು ಉಪಸ್ಥಿತರಿದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಭೀಮಪ್ಪ. ಹಚ್ಯಾಳ.ದೇವರ ಹಿಪ್ಪರಗಿ**

# ಕಾಯಕ ಜೀವಿಗಳಿಂದ ವಚನ ರಚನೆ: ಪ್ರಭುಜಿ ಮಹಾರಾಜರು

**ಜಮಖಂಡಿ :** ಬಸವಾದಿ ಶಿವಶರಣರು ಪರಿಶುದ್ಧವಾದ ಕಾಯಕ ಮಾಡಿ ಅನುಭವಕ್ಕೆ ತಂದುಕೊಂಡು ಆನಂದ ಪಡುವ ಉಮೇದಿನಿಂದ ವಚನಗಳು ರಚನೆಯಾಗಿವೆ. ವಚನ ಸಾಹಿತ್ಯ ಕಾಯಕ ಜೀವಿಗಳಿಂದ ರಚನೆಯಾಗಿದೆ. ವಚನಗಳನ್ನು ಬಳಸಿಕೊಂಡು ಬದುಕನ್ನು ಕಟ್ಟಿಕೊಳ್ಳಲು ಬರುತ್ತದೆ ಎಂದು ಹಿಪ್ಪರಗಿಯ ಸಂಗಮೇಶ್ವರ ಮಠದ ಪ್ರಭುಜಿ ಬೆನ್ನಾಳಿ ಮಹಾರಾಜರು ಹೇಳಿದರು.

ಜಮಖಂಡಿ ನಗರದ ಐತಿಹಾಸಿಕ ಓಲೇಮಠದ ಆಶ್ರಯದಲ್ಲಿ ಬಸವ ಜಯಂತಿ ನಿಮಿತ್ಯ ಏಪ್ರಿಲ್ 15 ರಿಂದ 29 ರವರೆಗೆ ಹಮ್ಮಿಕೊಂಡಿರುವ ಶರಣರ ವಚನ ಪ್ರವಚನ ಮತ್ತು ಸದ್ಭಾವನಾ ಪಾದಯಾತ್ರೆಅಂಗವಾಗಿ ಒಂಭತ್ತನೇ ದಿನವಾದ ಬುಧವಾರ ಸಂಜೆ ನಡೆದ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.

ದೇವರು ಕಾಣುವುದಿಲ್ಲ. ದೇವರಿಗೆ ರೂಪ, ಬಣ್ಣ, ಆಕಾರವಿಲ್ಲ. ದೇವರು ನಿರ್ಗುಣ, ನಿರಾಕಾರ, ಅವ್ಯಕ್ತನಿದ್ದಾನೆ. ದೇವರನ್ನು ಪರಮಸತ್ಯ ಎನ್ನುತ್ತಾರೆ. ಆತ್ಮವೇ ಸತ್ಯ. ಆತ್ಮನೇ ನಾನು. ಆತ್ಮ ಪರಮಾತ್ಮನ ಅಂಶ. ಪರಮಾತ್ಮನೇ ಆತ್ಮ. ತಾನೇ ಪರಮಾತ್ಮ ಎಂಬ ಸತ್ಯವನ್ನು ಅರಿಯಲು ಸತ್ಸಂಗದಲ್ಲಿ ಪಾಲ್ಗೊಳ್ಳಬೇಕು. ದೇವರನ್ನು ನೆನಪು ಮಾಡಿಕೊಳ್ಳಲು ವಚನಗಳು ಬೇಕು ಎಂದು ಆಶೀರ್ವಚನ ನೀಡಿದರು.

ಝುಂಜರವಾಡದ ಬಸವರಾಜೇಂದ್ರ ಶರಣರು ಪ್ರವಚನ ನುಡಿ ಹಂಚಿಕೊಳ್ಳುತ್ತ ಮಾತನಾಡಿ, ಸಂಸ್ಕಾರ ಭವಿಯನ್ನು ಭಕ್ತನನ್ನಾಗಿ ಮಾಡುತ್ತದೆ. ಮನುಷ್ಯರಾದವರು ಮಹಾದೇವನನ್ನು ಪ್ರಚುರ ಪಡಿಸಿಕೊಳ್ಳಲು ಸಂಸ್ಕಾರ ಅಗತ್ಯ. ಮನುಷ್ಯನಿಗೆ ಸಂಸ್ಕಾರ ಕೊಟ್ಟರೆ ಮಹಾದೇವನಾಗಿ ಬಿಡುತ್ತಾನೆ ಎಂದರು. ಮಕ್ಕಳ ಬೆಳವಣಿಗೆಯಲ್ಲಿ ತಾಯಿಯ ಪಾತ್ರ ಬಹಳ ದೊಡ್ಡದಿದೆ. ಆದರೆ ಇಂದಿನ





ತಾಯಂದಿರು ಮಕ್ಕಳಲ್ಲಿ ಧೈರ್ಯ ತುಂಬುವ ಕೆಲಸ ಮಾಡುತ್ತಿಲ್ಲ. ಆತ್ಮಸ್ಥೈರ್ಯ ತುಂಬುತ್ತಿಲ್ಲ. ಮಕ್ಕಳಿಗೆ ಸಂಸ್ಕಾರ ಕೊಡಲಾರದ್ದಕ್ಕೆ ಅನಾಥಾಶ್ರಮಗಳು ಹುಟ್ಟಿಕೊಳ್ಳುತ್ತಿವೆ. ಮಕ್ಕಳು ಅರಿತು ಆಚರಿಸುವಂತೆ ಮಾಡುವುದು ತಾಯಂದಿರ ಕೈಯಲ್ಲಿದೆ. ತಾಯಂದಿರು ಮಕ್ಕಳಲ್ಲಿ ಭವಿಷ್ಯ ಮತ್ತು ಕನಸು ಕಾಣಬೇಕು ಎಂದು ಆಶೀರ್ವಚನ ನೀಡಿದರು.

ಅರ್ಬನ್ ಬ್ಯಾಂಕ್ ಉಪಾಧ್ಯಕ್ಷ ಮಾಮೂನ ರಶೀದಪಾರ್ಥನಳ್ಳಿ,ಜಮಖಂಡಿಗುತ್ತಿಗೆದಾರರ ಸಂಘದ ಅಧ್ಯಕ್ಷ ಎ. ಆರ್. ಶಿಂಧೆ, ಸರ್ಕಾರಿ ನೌಕರರ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಪಿ. ಬಿ. ಅಜ್ಜನವರ, ನಿವೃತ್ತ ಉಪಪ್ರಾಚಾರ್ಯ ಎನ್. ಬಿ. ಬಿರಾದಾರ ಮಾತನಾಡಿದರು.

ಸಾಹಿತಿ ಬಸವರಾಜ ಯಡಹಳ್ಳಿ, ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ಏಗಪ್ಪ ಸವದಿ, ಮಲ್ಲಿಕಾರ್ಜುನ ಲಿಂಗನೂರ, ನಗರಸಭೆ ಸದಸ್ಯರಾದ ಪ್ರಶಾಂತ ಚರಕಿ, ಮಹಾನಂದಾ ಕಲೂತಿ, ಮಹಾನಂದಾ ಪಾಟೀಲ, ಜಯಶ್ರೀ ಪಾಟೀಲ ಉಪಸ್ಥಿತರಿದ್ದರು.

ಶ್ರಾವಣಿ ಕೊಕಟನೂರ ಭರತನಾಟ್ಯ ಪ್ರದರ್ಶಿಸಿದರು. ಜಮಖಂಡಿ ಸ್ತ್ರೀಶಕ್ತಿ ಸಂಘದ ಸದಸ್ಯೆಯರಾದ ಪೂರ್ಣಿಮಾ ಮಾಳಿ, ಪ್ರತಿಭಾ ಅಕ್ಕಿ ಪರಿಸರ ಸಂರಕ್ಷಣೆಯ ಮಹತ್ವ ಕುರಿತು ಜಾಗೃತಿ ಮೂಡಿಸಿದರು.

ಗದುಗಿನ ಗವಾಯಿ ರವಿಕುಮಾರ ಬೆಣ್ಣಿ, ತಬಲಾ ವಾದಕ ಹನಮಂತ ಅಂಕದ ಸಂಗೀತ ಸೇವೆ ಸಲ್ಲಿಸಿದರು. ವಾಣಿಶ್ರೀ ನಾವಿ, ವರ್ಷಾ ನಾವಿ ಸಹೋದರಿಯರು ಪ್ರಾರ್ಥನೆ ಗೀತೆ ಹಾಡಿದರು. ರಘು ಲಗಳಿ ಸ್ವಾಗತಿಸಿದರು. ಈರಪ್ಪ ಜಮಖಂಡಿ ಸೊಗಸಾಗಿ ನಿರೂಪಿಸಿದರು. ಓಲೇಮಠದ ಆನಂದ ಶ್ರೀಗಳು ಶರಣು ಸಮರ್ಪಿಸಿದರು.

## ತಾಯಿಯ ಸ್ಫೂರ್ತಿಯಿಂದ ಯುಪಿಎಸ್‌ಇಯಲ್ಲಿ ದೇಶಕ್ಕೆ 482 ರ್‍ಯಾಂಕ್



**ತಾಳಿಕೋಟೆ :** ಮಕ್ಕಳನ್ನು ಸಾಕಿ ಸಲುವುದರೊಂದಿ ಉತ್ತಮ ಸಂಸ್ಕಾರದ ಜೊತೆಗೆ ಶಿಕ್ಷಣವಂತರನ್ನಾಗಿ ಮಾಡಲು ಅಕ್ಕಪಕ್ಕದಮನೆಗಳಲ್ಲಿಕೆಲಸಮಾಡುತ್ತಾ ಪಟ್ಟಶ್ರಮದ ಫಲವಾಗಿ ಕೊನೆಗೂ ಮಗ ಡಾ.ಮಹೇಶ ಮಡಿವಾಳರ ದೇಶದ ಅತ್ಯುನ್ನತ ಹುದ್ದೆ ಯುಪಿಎಸ್‌ಇ ಪರಿಕ್ಷೆಯಲ್ಲಿ 482ನೇ ರ್‍ಯಾಂಕ್ ಪಡೆಯುವದರೊಂದಿಗೆ ಸಾಧನೆಯ ಮೆಟ್ಟಿಲನ್ನು ಏರಿದ್ದಾನೆ.

ತಾಲೂಕಿನ ಮಡಿಕೇಶ್ವರ ಗ್ರಾಮದ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಆಡಳಿತ ವೈಧ್ಯಾಧಿಕಾರಿಯಾಗಿಸೇವೆಸಲ್ಲಿಸುತ್ತಿರುವಡಾ.ಮಹೇಶ ಮಡಿವಾಳರ ತನ್ನ ತಾಯಿ ಯಮನಾಬಾಯಿ ಅವರು ತನಗೆ ಏಷ್ಟೇ ಕಷ್ಟ ಬಂದಿದ್ದರೂ ಕೂಡಾ ಮಕ್ಕಳಿಗೆ ತೋರಿಸದೇ ಪಡುತ್ತಿರುವ ಶ್ರಮವನ್ನು ಮನದಲ್ಲಿಯೇ ನೊಡುತ್ತಾ ತಾಯಿಗೆ ಆಸರೆಯಾಗಬೇಕೆಂಬ ಛಲದೊಂದಿಗೆ ಮುನ್ನಡೆಯುತ್ತಾ ಕೊನೇಗೂ ಯುಪಿಎಸ್‌ಇಪರಿಕ್ಷೆಯಲ್ಲಿಪಾಸ್‌ಮಾಡುವಮೂಲಕ ಜಿಲ್ಲೆಯ ಕೀರ್ತಿಯನ್ನು ಹೆಚ್ಚಿಸಿದ್ದಾನೆ. ಪ್ರಾಥಮಿಕ ಶಿಕ್ಷಣದಿಂದಲೇತಾಯಿಯಸ್ಪೂರ್ತಿಯಮಾತುಗಳನ್ನು ಆಲಿಸುತ್ತಾ ಪಾಲಿಸುತ್ತಾ ಸಾಗುವದರೊಂದಿಗೆ ತಾಯಿ ತಮ್ಮನ್ನು ಸಾಕಿ ಸಲುವುದಕ್ಕಾಗಿ ಮನೆಕೆಲಸಗಳಿಗೆ ತೆರಳುತ್ತಿರುವದನ್ನು ಲಕ್ಷೀಸಿದ ಮಹೇಶ ಮಡಿವಾಳರ ಉತ್ತಮ ಶಿಕ್ಷಣದೊಂದಿಗೆ ತಾಯಿಯನ್ನು ಚೆನ್ನಾಗಿ ನೋಡಿಕೊಳ್ಳಬೇಕುಎಲ್ಲರಂತೆನಾನೂಕೂಡಾದೇಶದ ಜನರಿಗೆ ಒಳ್ಳೆಯ ಕೆಲಸಗಳನ್ನು ಮಾಡುವದರೊಂದಿಗೆ ಮುಂದೆ ಸಾಗಬೇಕೆಂಬ ಅಂಬಲದೊಂದಿಗೆ ಯುಪಿಎಸ್‌ಇ ಪರಿಕ್ಷೆ ಬರೆಯುವದರ ಕೊಡೆಗೆ ಗಮನಕೊಟ್ಟ ಡಾ.ಮಹೇಶ ಮಡಿವಾಳರ ಅವರು ಮೂಲತ ಕಡುಬಡತನವನ್ನು ಅನುಭವಿಸುತ್ತಾ ಸಾಗಿ ಬಂದಿದ್ದ ಇವರು ಪ್ರಾಥಮಿಕ ಶಿಕ್ಷಣವನ್ನು ಸಿಂದಗಿ ತಾಲೂಕಿನ ಹೊನ್ನಳ್ಳಿ ಗ್ರಾಮದಲ್ಲಿ ಮುಗಿಸುವದರೊಂದಿಗೆ 6ನೇ ತರಗತಿಯಿಂದ 10 ನೇ ತರಗತಿಯವರೆಗೆ ಇಂಡಿ ತಾಲೂಕಿನ ಹೊರ್ತಿ ಗ್ರಾಮದ ಮುರಾರ್ಜಿ ಶಾಲೆಗೆ ಸೇರಿಕೊಂಡ ಅವರು, ಮುಂದೆ 12ನೇ ತರಗತಿಯವರೆಗೆ ವಿಜಯಪುರದ ಮುರಾರ್ಜಿ ಶಾಲೆಯಲ್ಲಿ ಶಿಕ್ಷಣವನ್ನು ಪಡೆದು 2012ರಲ್ಲಿ ನೀಟ್ ಪಾಸ್ ಆಗುವದರೊಂದಿಗೆ ಹಾಸನ್ ಜಿಲ್ಲೆಯ ಸರ್ಕಾರಿ ಮೇಡಿಕಲ್ ಕಾಲೇಜಿನಲ್ಲಿ ಶಿಕ್ಷಣ ಪಡೆದು 2018ರಲ್ಲಿ ಹಾಸನ ಜಿಲ್ಲೆಯ ಕೆಲಕಡಲೆ ಗ್ರಾಮದಲ್ಲಿ ಸರ್ಕಾರಿ ವೈಧ್ಯಾಧಿಕಾರಿಯಾಗಿ ಸೇವೆಗೆ ಸೇರಿಕೊಂಡರು.

2021ರಲ್ಲಿ ತಾಳಿಕೋಟೆ ತಾಲೂಕಿನ ಮಡಿಕೇಶ್ವರ ಗ್ರಾಮದ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಆಡಳಿತ ವೈಧ್ಯಾಧಿಕಾರಿಯಾಗಿ ವರ್ಗಾವಣೆಗೊಂಡು ಸೇವೆಸಲ್ಲಿಸುತ್ತಾಇನ್ನೂಹೆಚ್ಚಿನಹುದ್ದೆಗೆಹೋಗಬೇಕೆಂಬ ಕನಸ್ಸನ್ನು ಕಟ್ಟಿಕೊಂಡ ಡಾ.ಮಹೇಶ ಮಡಿವಾಳರ ಯುಪಿಎಸ್‌ಪರಿಕ್ಷೆಯಕಡೆಗೆತಮ್ಮಓದಿನಗಮನವನ್ನು ಕೊಟ್ಟರು. ತಮ್ಮ ಸೇವಾ ಅವಧಿಯ ನಂತರ ದಿನದ 6 ರಿಂದ 10 ಘಂಟೆಗಳ ಕಾಲ ಓದಿನೊಂದಿಗೆ ಮುಂದೆ ಸಾಗಿದ ಇವರು ಸತತ ಪ್ರಯತ್ನಕ್ಕೆ ಫಲ ಸಿಕ್ಕೇ ಸಿಗುತ್ತದೆ ಎಂಬಂತೆ 5ಭಾರಿಗೆ ಯುಪಿಎಸ್‌ಇ ಪರಿಕ್ಷೆಯಲ್ಲಿ ಕನ್ನಡ ಮಾಧ್ಯಮದಲ್ಲಿ ಪರಿಕ್ಷೆ ಬರೆದು ಪಾಸ್ ಆಗುವದರೊಂದಿಗೆ ವಿಜಯಪುರ ಜಿಲ್ಲೆಯಲ್ಲಿ ಮೊದಲಿಗರಾಗಿಗುರುತಿಸಿಕೊಂಡುತಮ್ಮಗುರಿಯನ್ನು ಮುಟ್ಟಿದ್ದಾರೆ.

## ಉಗ್ರರನ್ನು ಗುಂಡಿಕ್ಕಿ ಕೊಲ್ಲಲು ಆಗ್ರಹ



**ಬಸವನಬಾಗೇವಾಡಿ:** ಜಮ್ಮುಕಾಶ್ಮೀರ ಪಹಲಗಾಮನಲ್ಲಿ ಭಯೋತ್ಪಾದರ ದಾಳಿಗೆ ಕೂಡಲೇ ಅವರನ್ನು ಬಂಧಿಸಿ ಗಲ್ಲಿಗೇರಿಸಬೇಕೆಂದರು ಉಗ್ರಗಾಮಿಗಳನ್ನು ನಿರ್ಧಾಕ್ಷಣವಾಗಿ ಗುಂಡಿಗೆ ಕೊಲ್ಲಬೇಕು ಎಂದು ರಾಷ್ಟ್ರೀಯ ಬಸವ ಸೈನ್ಯದ ಸಂಸ್ಥಾಪಕರಾದ ಶಂಕರ್ ಗೌಡ ಬಿರಾದಾರ್ ಆಗ್ರಹಿಸಿದ್ದಾರೆ ಭಯೋತ್ಪಾದಕರ ದಾಳಿ ಖಂಡಿಸಿ ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಬುಧವಾರ ಸೈನ್ಯ ಸಂಘಟನೆಯಿಂದ ಹಮ್ಮಿಕೊಂಡ ಪ್ರತಿಭಟನೆಯಲ್ಲಿ ಅವರ ಮಾತನಾಡಿದರು ಗುರಿಯಾಗಿಸಿಕೊಂಡು ಭಯೋತ್ಪಾದಕರಅಮಾಯಕರನ್ನುಹತ್ಯೆಮಾಡಿದ್ದಾರೆ ಕಾರಣ ದೇಶದ ಪ್ರಧಾನ ಮಂತ್ರಿಗಳು ಸೈನಿಕರಿಗೆ ಆದೇಶ ನೀಡಿ ಭಯೋತ್ಪಾದಕರನ್ನು ಕಂಡಲಿ ಗುಂಡಿ ಕಲು ಆದೇಶ ಮಾಡಬೇಕೆಂದರು ಪ್ರತಿಭಟನೆಯಲ್ಲಿ ರಾಷ್ಟ್ರೀಯ ಬಸವ ಸೇನೆ ತಾಲೂಕ ಘಟಕದ ಅಧ್ಯಕ್ಷ ಸಂಜು ಬಿರಾದಾರ ಶ್ರೀಕಾಂತ್ ಕೊಟ್ರಶೆಟ್ಟಿ ಬಸವರಾಜ್ ಗೊಳಸಂಗಿ ಜಟ್ಟಿಂಗರಾಯ ಮಾಲಗಾರ ಸಂಗಮೇಶ ಜಾಲಗೇರಿ ಸಂತೋಷ್ ಚಿಂಚೋಳಿ ಮುದಕಪ್ಪ ಪಟ್ಟಣಶೆಟ್ಟಿ ಸಂಜು ಜಾಲಗೇರಿ ಸುರೇಶ್ ಹೂಗಾರ ವೀರೇಶ್ ಗಬ್ಬುರ್ ಬಾಪು ಬಾಗೇವಾಡಿ ನವೀನ ಬೇವನೂರ್ ಮಾಂತೇಶ ಹೆಬ್ಬಾಳ ಮುಂತಾದವರು ಇದ್ದರು.

## ಸಂಶೋಧಕರು ಸತ್ಯದ ಅನ್ವೇಷಣೆಗೆ ಮುಂದಾಗಬೇಕು: ಸಮಕುಲಾಧಿಪತಿ ಪ್ರೊ. ವೈ.ಎಂ. ಜಯರಾಜ್



**ವಿಜಯಪುರ :** ನಾವು ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಬಹಳ ಮುಂದುವರೆದಿದ್ದೇವೆ ಆದರೆ ಸಮಾಜ ವಿಜ್ಞಾನದ ಹಂತದಿಂದ ಬಹಳ?ಷ್ಟು ಪ್ರಾಚೀನರಾಗಿದ್ದೇವೆ ಎಂದು ಬಿ.ಎಲ್.ಡಿ.ಇ ಡೀಮ್ಡ್ ವಿವಿ ಸಮಕುಲಾಧಿಪತಿ ಪ್ರೊ.ವೈ. ಎಂ.ಜಯರಾಜ್ ಹೇಳಿದರು.

ನಗರದ ಬಿ.ಎಲ್.ಡಿ.ಇ.ಸಂಸ್ಥೆಯ ಎಸ್.ಬಿ.ಕಲಾ ಹಾಗೂ ಕೆಸಿಪಿ ವಿಜ್ಞಾನ ಮಹಾವಿದ್ಯಾಲಯದಲ್ಲಿ ಐಕ್ಯುಎಸಿ,ಐಐಸಿ ಮತ್ತುಸಂಶೋಧನೆಮತ್ತುಅಭಿವೃದ್ಧಿಕೋಶ ಹಾಗೂ ಎಲ್ಲ ಸ್ನಾತಕೋತ್ತರ ವಿಭಾಗಗಳ ಸಹಯೋಗಲ್ಲಿ ದಿನಾಂಕ:23-04-2025 ಬುಧವಾರದಂದು ಆಯೋಜಿಸಲಾದ "ಸಂಶೋಧನಾ ಅಭ್ಯಾಸಗಳು: ಸಾಹಿತ್ಯ, ನೀತಿಶಾಸ್ತ್ರ,
ಅಂಕಿ ಅಂಶಗಳು ಮತ್ತು ಶೈಕ್ಷಣಿಕದ" ಕುರಿತ ಒಂದು ದಿನದ ರಾಜ್ಯ ಮಟ್ಟದ (ಹೈಬ್ರಿಡ್ ಮೋಡ್) ಕಾರ್ಯಗಾರ ಉದ್ಘಾಟಿಸಿ ಮಾತನಾಡಿದ ಅವರು ಸಂಶೋಧನೆ ಎಂದರೇನು? ಅದಕ್ಕಾಗಿ ನೀವು ತೆಗೆದುಕೊಳ್ಳುವ ನಿರ್ಧಾರವೇನು.ಸಂಶೋಧಕರು ಸತ್ಯದ ಅನ್ವೇಷಣೆಯಲ್ಲಿ ಹೋಗಬೇಕು. ಅದು ಏನು,ಅದು ಏಕೆ, ಎಲ್ಲಿದೆ,ಈ ಎಲ್ಲಾ ಪ್ರಶ್ನೆಗಳು ಅಂತಿಮವಾಗಿ ಹೇಗೆ ರೂಪಿಸುತ್ತವೆ ಮತ್ತು ವಿಶೇಷವಾಗಿ ಸಂಶೋಧನೆಯು ಇತ್ತೀಚಿನ ಎಐ ಹಾಗು ಡಿಜಿಟಲ್ ತಂತ್ರಜ್ಞಾನದಿಂದಾಗಿ ಸರಳೀಕರಣವಾಗಿವೆ.ಹೊಸಆವಿಷ್ಕಾರಗಳು ಮತ್ತು ನಾವೀನ್ಯತೆಗಳು ಮೂಲಕ ವಿನೂತನವಾದ ಸಂಶೋಧನೆಯನ್ನು ಕೈಗೊಳ್ಳಬಹುದಾಗಿದೆ. ಇಂದಿನ ಆಧುನಿಕ ಯುಗದಲ್ಲಿ ಹಲವಾರು ಇತ್ತೀಚೆಗಿನ ಘಟನೆಗಳು ನಿದರ್ಶನ ಬಹುಶಃ ನಾವು ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಬಹಳ ಮುಂದುವರಿದಿದ್ದೇವೆ ಆದರೆ ಸಮಾಜ ವಿಜ್ಞಾನದ ಹಂತದಿಂದ ಬಹಳಷ್ಟು ಪ್ರಾಚೀನರಾಗಿದ್ದೇವೆ. ಕಳೆದ ಕೆಲವು ದಿನಗಳ ಹಿಂದೆ ಕಾಶ್ಮೀರದಲ್ಲಿ ಘಟನೆ ಸ್ಮರಿಸಬಹುದು ಜಾಗತಿಕ ಮಟ್ಟದಲ್ಲಿ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಚರ್ಚೆಗೆ ಮುನ್ನೆಲೆಗೆ ಬರುತ್ತಿದೆ ಯಾರುಏಕೆಕೊಂದರುಏಕೆಬಲಿಯಾದರು? ಸಂಘರ್ಷಕ್ಕೆ ಹಿಂದೂವೇ ಅಥವಾ ಧಾರ್ಮಿಕ ಸಂಘರ್ಷವೇ ನಮಗೆ ಗೊತ್ತಿಲ್ಲದ ಸಾಮಾಜಿಕ ಪರಿಕಲ್ಪನೆಯೇ? ಇದು ರಾಷ್ಟ್ರೀಯದೃಷ್ಟಿಕೋನವನ್ನುನೀಡಿಯಾರು ಕೊಲ್ಲುತ್ತಿದ್ದಾರೆ? ಇದು ಶಂಶೋಧಕರಿಗೆ ಮುಂದೆ ಸಂಶೋಧನೆಯಾಗಿದೆ ಎಂದರು. ಇಂತಹ ಹಲವಾರು ಘಟನೆಗಳ ಗೊತ್ತಿಲ್ಲದ ವಿಷಯಗಳನ್ನು ಸಂಶೋಧನೆಗಳಿಂದ ಗೊಂದಲ ನಿವಾರಣೆ ಅಲ್ಲದೆ ವಿಷಯದ ಆಳವನ್ನು ಹೆಕ್ಕಿ ತೆಗೆಯಲು ನಮಗೆ ಸಂಶೋಧನೆ ಅನುಕೂಲರವಾಗಿವೆ ಎಂದು ಹೇಳಿದರು.

ಈ ವೇಳೆಯಲ್ಲಿ ಕಾರ್ಯಗಾರದಲ್ಲಿ ಒಟ್ಟು ನಾಲ್ಕು ಅಧಿವೇಶನದಲ್ಲಿ ಮುಖ್ಯ ಸಂಪನ್ಮೂಲ ವ್ಯಕ್ತಿಗಳಾಗಿ ಬೆಂಗಳೂರಿನ ರಾಷ್ಟ್ರೀಯಏರೋಸ್ಪೇಸ್‌ನಐಸಿಎಎಸ್‌ಟಿಯ ಮಾಜಿ ಮುಖ್ಯಸ್ಥರು, ಡಾ. ಐ. ಆರ್. ಎನ್. ಗೌಡರ್ 'ಸಾಹಿತ್ಯ ವಿಮರ್ಶೆ ಮತ್ತು ಶೈಕ್ಷಣಿಕ ಸಂಶೋಧನೆಗಾಗಿ ಇ-ಸಂಪನ್ಮೂಲಗಳು' ಮತ್ತು 'ಸಂಶೋಧನಾ ಗುಣಮಟ್ಟ, ಪ್ರಕಟಣೆ ನೀತಿಶಾಸ್ತ್ರ ಮತ್ತು ಆಯ್ಕೆ ಜರ್ನಲ್‌ಗಳು' ಕುರಿತು ವಿಚಾರ ಮಂಡಿಸಿದರು,

ವಿಜಯಪುರದ ಬಿ ಎಲ್ ಡಿ ಇ ಡೀಮ್ಡ್ ವಿಶ್ವವಿದ್ಯಾಲಯದ ಮುಖ್ಯ ಗ್ರಂಥಪಾಲಕರು ಡಾ.ಪ್ರಸನ್ನಕುಮಾರ್ ಬಿ.ಎಂ. ಅವರು 'ಪುನರ್ ಕಲ್ಪಿಸಿದ ಸಂಶೋಧನೆ:ವಿದ್ಯಾರ್ಥಿವೇತನದಲ್ಲಿ ಎಐ ಶಕ್ತಿಯನ್ನು ಬಳಸಿಕೊಳ್ಳುವುದು' ಬಗ್ಗೆ ಹಾಗೂ ವಿಜಯಪುರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಲೈಬ್ರರಿ ವಿಭಾಗ & ಮಾಹಿತಿ ವಿಜ್ಞಾನದ ಪ್ರಾಧ್ಯಾಪಕ, ಪ್ರೊ. ಗವಿಸಿದ್ದಪ್ಪ ಆನಂದಳ್ಳಿ 'ಎಸ್ ಪಿ ಎಸ್ ಎಸ್ ಸರಳೀಕರಣ: ಡೇಟಾ ವಿಶ್ಲೇಷಣೆಯ ಶಕ್ತಿಯನ್ನುಅನ್‌ಲಾಕ್ ಮಾಡುವುದರ' ಬಗ್ಗೆ ವಿಚಾರವನ್ನು ಮಂಡಿಸಿದರು.

ಸಾಯಂಕಾಲ ಸಮಾರೋಪ ಸಮಾರಂಭ ಕಾರ್ಯಕ್ರಮ ಜರುಗಿತು ಪ್ರಾಚಾರ್ಯೆ ಡಾ ಆರ್.ಎಂ.ಮಿರ್ದೆ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಪ್ರೊ.ವಿದ್ಯಾ ಪಾಟೀಲ ಕಾರ್ಯಕ್ರಮದ ಸಂಪೂರ್ಣ ವರದಿ ಓದಿದರು.

ಈ ಸಂದರ್ಭದಲ್ಲಿ ಉಪಪ್ರಾಚಾರ್ಯ ಅನಿಲ ಬಿ. ನಾಯಕ್, ಐಕ್ಯೂಎಸಿ ನಿರ್ದೇಶಕ ಡಾ.ಪಿ.ಎಸ್.ಪಾಟೀಲ, ಸಂಶೋಧನೆ ಮತ್ತು ಅಭಿವೃದ್ಧಿ ಕೋಶದ ಸಂಯೋಜಕರು ಡಾ. ಮಹೇಶ್ ಕುಮಾರ್ ಕೆ. ಪ್ರೊ. ಆರ್. ಡಿ. ಜೋಶಿ, ಡಾ. ಗಿರಿಜಾ ನಿಂಬಾಳ್, ಡಾ. ಎಸ್. ಎನ್. ಉಂಕಿ ಪ್ರೋ.ಸಂತೋಷ ವಂಭಾಸೆ, ಪ್ರೋ.ಸ್ವೇತಾ ಸವನೂರ, ಡಾ.ಶ್ರೀನಿವಾಸ ದೊಡ್ಡಮನಿ, ಪ್ರೊ.ಸೌಮ್ಯ ಸಜ್ಜನ್ ಡಾ. ಅಮಿತ್ ತೇರ್ದಾಳೆ,ಡಾ. ಕೃಷ್ಣಾ ಮಂಡ್ಲಾ,ಡಾ.ತರನ್ನುಮ್ ಜಬೀನಖಾನ್, ಮಹಾವಿದ್ಯಾಲಯದ ಬೋಧಕರ, ಬೋಧಕೇತರ ಸಿಬ್ಬಂದಿ, ಸಂಶೋಧನಾರ್ಥಿಗಳು ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಪ್ರೊ.ಪವನಕುಮಾರ ಮಹಿಂದ್ರಕರ್ ತಾಂತ್ರಿಕ ವ್ಯವಸ್ಥೆ ನಿರ್ವಹಿಸಿದರು, ಗಣ್ಯರನ್ನು ಡಾ.ಧಾನೇಶ್ವರಿ ಮೂಲಿಮನಿ ಸ್ವಾಗತಿಸಿದರು,ಕುಮಾರಿ ಪ್ರಿಯಾಂಕಾ ಭೂಶೆಟ್ಟಿ ಪ್ರಾರ್ಥಿಸಿದರು, ಕುಮಾರ್ ವಾದಿರಾಜ ಕುಲಕರ್ಣಿ ಕಾರ್ಯಕ್ರಮವನ್ನು ನಿರೂಪಿಸಿದರು. ಡಾ.ಮಂಜುನಾಥ ಹೆಚ್ ಎಂ ವಂದಿಸಿದರು.

## ನಿರ್ಗತಿಕರಿಗೆ ಅನುಕೂಲವಾಗುವ ಶ್ರೀ ಕ್ಷೇತ್ರ ಧರ್ಮಸ್ಥಳ ಸಂಸ್ಥೆಯ ರೂ.1 ಸಾವಿರಗಳ ಹಣ



**ಹೊರ್ತಿ :** 'ಶ್ರೀ ಕ್ಷೇತ್ರ ಧರ್ಮಸ್ಥಳ ಸಂಸ್ಥೆಯು ಇಂಡಿ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ನಿರ್ಗತಿಗಕರನ್ನು ಗುರುತಿಸಿ ಅವರಿಗೆ ರೂ.1ಸಾವಿರ ಮಾಸಾಶನ ಮಂಜೂರು ಮಾಡಿ ನೀಡುವ ಮೂಲಕ ನಿರ್ಗತಿಗಕರ ಆಶ್ರಯದ ಆಶಾಕಿರಣವಾಗಿದೆ' ಎಂದು ಇಂಡಿ ತಾಲ್ಲೂಕು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನಾಧಿಕಾರಿ ನಟರಾಜ್ ಎಲ್ ಎಂ. ಹೇಳಿದರು.

ಸಮೀಪದ ಚಿಕ್ಕಬೇವನೂರು ವಲಯದ ಅಂಜುಟಗಿ ಗ್ರಾಮದಲ್ಲಿ ಮಂಗಳವಾರ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವತಿಯಿಂದ ಹಮ್ಮಿಕೊಂಡಿದ್ದ ಶ್ರೀ ಕ್ಷೇತ್ರ ಧರ್ಮಸ್ಥಳ ಧರ್ಮಾಧಿಕಾರಿ ವಿರೇಂದ್ರ ಹೆಗಡೆ ಯವರು ನಿರ್ಗತಿಗಕರಿಗೆ ಪ್ರತಿ ತಿಂಗಳು ರೂ.1ಸಾವಿರಗಳ ಹೊಸದಾಗಿ ಗಜರಾಬಾಯಿ, ಪಾರ್ವತಿ, ಮರೆಂಬಿ, ಕಾಂತವ್ವ ಈ ನಾಲ್ಕು ಜನ ಮಹಿಳೆಯರಿಗೆ ಮಂಜುರಾತಿ ಆದೇಶ ಪ್ರಮಾಣ ಪತ್ರ ವಿತರಿಸಿ ಮಾತನಾಡಿ, 'ಇನ್ನೂ ಹಲವು ಯೋಜನೆಗಳ ಕುರಿತು ಸಮಗ್ರ ಮಾಹಿತಿ ನೀಡಿದರು.ಈ ವೇಳೆ, ಅಂಜುಟಗಿ ಗ್ರಾಮದ ಪಿಕೆಪಿಎಸ್ ಉಪಾಧ್ಯಕ್ಷ ಅಣ್ಣಾರಾಯ ರೇವಪ್ಪ.ಬಬಲಾದಿ, ವಿಜಯಕುಮಾರ ಪೈಗೊಂಡ, ಶಂಕರ ದಡ್ಡಣ್ಣವರ, ಗ್ರಾಮ ಪಂಚಾಯಿತಿ ಸದಸ್ಯರಾದ ಬಂಡೆಪ್ಪ ಅಲ್ಲಬಗೊಂಡ, ಸಾಯಿಕುಮಾರ ಬನಪಟ್ಟಿ, ಸುರೇಶ ಮಾದರ, ಜ್ಞಾನ ವಿಕಾಸ ಸಮನ್ವಯ ಅಧಿಕಾರಿ ಜಯಶ್ರೀ ಎಸ್ ಎಂ, ವಲಯದ ಮೇಲ್ವಿಚಾರಕಿ ಅಶ್ವಿನಿ ಸಂಗೋಳಿ, ಸೇವಾ ಪ್ರತಿನಿಧಿ ಗಂಗಾ ಸಾಬ್ಳೆ, ಸಿದ್ದಲಿಂಗ ಮಡಿವಾಳ ಹಾಗೂ ಸಂಘದ ಸರ್ವ ಸದಸ್ಯರು ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು.

## ಸೈದಾಪುರ ಶಿವಲಿಂಗೇಶ್ವರ ರಥೋತ್ಸವ ಸಂಪನ್ನ

**ಮಹಾಲಿಂಗಪುರ:** ಸಮೀಪದ ಸೈದಾಪುರ ಗ್ರಾಮದಲ್ಲಿ ಎರಡು ದಿನಗಳ ಕಾಲ ಜರುಗಿದ ಶಿವಲಿಂಗೇಶ್ವರ ಜಾತ್ರೆಯು ಮಂಗಳವಾರ ರಾತ್ರಿ ಶಿವಲಿಂಗೇಶ್ವರ ಮರು ರಥೋತ್ಸವದೊಂದಿಗೆ ಸಂಪನ್ನಗೊಂಡಿತು.

ಶಿವಲಿಂಗೇಶ್ವರಮೂರ್ತಿಯನ್ನುಭವ್ಯರಥದಲ್ಲಿಕೂರಿಸಿ ಪೂಜೆ ನೆರವೇರಿಸಿ ಮಂಗಳಾರತಿ ಮಾಡಲಾಯಿತು. ಸೋಮವಾರ ತುಂಬಿದ ತೇರು, ಮಂಗಳವಾರ ಮರು ರಥೋತ್ಸವದೊಂದಿಗೆ ಎರಡು ದಿನಗಳ ಜಾತ್ರಾ ಮಹೋತ್ಸವ ಸಮಾರೋಪಗೊಂಡಿತು.

ಅರ್ಚಕಮಾಂತಯ್ಯಮಠಪತಿ ಹಾಗೂ ಮುಖಂಡರು ರಥೋತ್ಸವಕ್ಕೆ ಚಾಲನೆ ನೀಡಿದರು. ಶಿವಲಿಂಗೇಶ್ವರ ದೇವಸ್ಥಾನದಿಂದ ಪಾದಗಟ್ಟೆಯವರೆಗೆ ಸಾಗಿದ ರಥೋತ್ಸವಕ್ಕೆ ಭಕ್ತರು ಬೆಂಡು, ಬೆತ್ತಾಸು, ಬಾಳೆಹಣ್ಣು ತೂರಿ ಭಕ್ತಿಯ ಪರಾಕಾಷ್ಠೆ ಮೆರೆದರು. ಶಾಸಕ ಸಿದ್ದು ಸವದಿ, ಮುಖಂಡರಾದ ಮಹಾಂತೇಶ ಹಿಟ್ಟಿನಮಠ, ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣೂರ, ಮಹಾಲಿಂಗಪ್ಪ ಸನದಿ ಸೇರಿದಂತೆ ಹಲವು ರಾಜಕೀಯ ಮುಖಂಡರು ಶಿವಲಿಂಗೇಶ್ವರ ದರ್ಶನ ಪಡೆದರು.

ರಥೋತ್ಸವದ ಮುಂದೆ ಕಂಡ್ಯಾಳ ಬಾಸಿಂಗ, ನಂದಿಕೋಲು, ಡೊಳ್ಳು ಕುಣಿತ, ಕೋಲಾಟ, ಕರಡಿ ಮಜಲು ಸೇರಿದಂತೆ ವಿವಿಧ ವಾದ್ಯ ಮೇಳಗಳ ಪ್ರದರ್ಶನ ಮೆರಗು ನೀಡಿದವು. ಜಾತ್ರೆ ಅಂಗವಾಗಿ 'ರೈತರ ರಾಜ್ಯದಲ್ಲಿ ರೌಡಿಗಳ ದರ್ಬಾರ್' ನಾಟಕ ಪ್ರದರ್ಶನಗೊಂಡಿತು.

## ಕಂಬಿ ಮಲ್ಲಯ್ಯ ಐದೇಶಿ, ಕಾರ್ತಿಕೋತ್ಸವ ಸಂಭ್ರಮ

**ಮಹಾಲಿಂಗಪುರ :** ಸಮೀಪದ ರನ್ನಬೆಳಗಲಿ ಪಟ್ಟಣದಲ್ಲಿ ಶ್ರೀಶೈಲ ಮಲ್ಲಿಕಾರ್ಜುನ ಕಂಬಿಯ ಮಲ್ಲಿಕಾರ್ಜುನ ಐದೇಶಿ ಉತ್ಸವ, ಮಹಾಲಿಂಗೇಶ್ವರ ಕಾರ್ತಿಕೋತ್ಸವ ಸಂಭ್ರಮದಿಂದ ಜರುಗಿತು.

ಮಲ್ಲಿಕಾರ್ಜುನ ಹಾಗೂ ಮಹಾಲಿಂಗೇಶ್ವರ ದೇವಸ್ಥಾನಕ್ಕೆಆಗಮಿಸಿದ ಭಕ್ತರು, ಕಂಬಿ ಮಲ್ಲಯ್ಯನಿಗೆ ಬೆಲ್ಲದ ನೈವೇದ್ಯ ಹಂಚಿದರು. ಉತ್ಸವ ನಿಮಿತ್ಯ ಎರಡೂ ದೇವಸ್ಥಾನಗಳನ್ನು ತಳಿರು, ತೋರಣ ಹಾಗೂ ದೀಪಗಳಿಂದ ಅಲಂಕರಿಸಲಾಗಿತ್ತು.

ಕಾರ್ತಿಕೋತ್ಸವ ಅಂಗವಾಗಿ ಹಿಪ್ಪರಗಿ ಅವರ ಮನೆಯಿಂದ ಸಣ್ಣ ಬಾನ, ದೊಡ್ಡ ಬಾನವನ್ನು ಮಹಾಲಿಂಗೇಶ್ವರ ದೇವಸ್ಥಾನಕ್ಕೆ ಕರಡಿ ಮಜಲು, ವಾದ್ಯ ವೈಭವದೊಂದಿಗೆ ಮೆರವಣಿಗೆ ಮೂಲಕ ತರಲಾಯಿತು.

ಸದಾಶಿವ ಹಿಪ್ಪರಗಿ, ಈರಪ್ಪ ಹಿಪ್ಪರಗಿ, ಮಹಾದೇವ ಹಿಪ್ಪರಗಿ, ಮುಕುಂದ ಹಿಪ್ಪರಗಿ, ಗುರುನಾಥಪ್ಪ ಹಿಪ್ಪರಗಿ, ಮುತ್ತಪ್ಪ ಹಿಪ್ಪರಗಿ, ಮಹಾಲಿಂಗಪ್ಪ ಹಿಪ್ಪರಗಿ ನೇತೃತ್ವ ವಹಿಸಿದ್ದರು.

ಬಾನ ನೈವೇದ್ಯ ನಂತರ ಐದೇಶಿ ಉತ್ಸವ ಅಂಗವಾಗಿ ಗಣಾಚಾರಿ ಅವರ ಮನೆಯಿಂದ 30 ಕೆ. ಜಿ. ಬೆಲ್ಲವನ್ನು ಸಂಬಾಳ, ಕರಡಿ ಮಜಲು ವಾದ್ಯಗಳ ಮೂಲಕ ಮೆರವಣಿಗೆ ಮೂಲಕ ಮಲ್ಲಿಕಾರ್ಜುನ ದೇವಸ್ಥಾನಕ್ಕೆ ತರಲಾಯಿತು.

ಐದೇಶಿ ಉತ್ಸವಕ್ಕೆ ಚಾಲನೆ ನೀಡಿದ ನಂತರ ಬೆಲ್ಲವನ್ನು ಹಂಚುವ ಕಾರ್ಯ ನಡೆಯಿತು. ಇಡೀ ಪಟ್ಟಣದಲ್ಲಿ ಹಬ್ಬದ ವಾತಾವರಣವೇ ಸೃಷ್ಟಿಯಾಗಿತ್ತು.

## ಅರ್ಥಪೂರ್ಣ ಗುರುವಂದನೆ ಹಾಗೂ ಸ್ನೇಹ ಸಮ್ಮಿಲನ



**ಮಹಾಲಿಂಗಪುರ :** ಬದುಕಿನಲ್ಲಿ ಜನ್ಮ ಕೊಟ್ಟವರಿಗೆ, ಜ್ಞಾನ ಕೊಟ್ಟವರಿಗೆ ಮತ್ತು ಸ್ನೇಹ ಕೊಟ್ಟವರಿಗೆ ಋಣಿಯಾಗಿರಬೇಕು ಎಂದು ಕೆಎಲ್‌ಇ ಕಾಲೇಜಿನ ಉಪನ್ಯಾಸಕ ಶಿವಲಿಂಗ ಸಿದ್ನಾಳ ಹೇಳಿದರು.

ಸ್ಥಳೀಯ ಸಿದ್ಧಾರೂಢ ಬ್ರಹ್ಮವಿದ್ಯಾಶ್ರಮದಲ್ಲಿ ಬನಶಂಕರಿ ಹಿರಿಯ ಪ್ರಾಥಮಿಕ ಶಾಲೆಯ 2003-04 ನೇ ಸಾಲಿನಲ್ಲಿ ಏಳನೇ ತರಗತಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ಹಮ್ಮಿಕೊಂಡಿದ್ದ ಗುರುವಂದನಾ ಹಾಗೂ ಸ್ನೇಹ ಸಮ್ಮಿಲನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕಲಿತ ಮೇಲೆ, ಬಲಿತ ಮೇಲೆ ಶಾಲೆಯನ್ನು, ಶಿಕ್ಷಕರನ್ನು ಮರೆಯಬಾರದು.

ಅಂದು ಜ್ಞಾನದ ಗಂಟು ಬಿಚ್ಚಲು ಒಂದಾಗಿಬಂದಿದ್ದವಿದ್ಯಾರ್ಥಿಗಳು ಇಂದು ನೆನಪಿನ ಗಂಟು ಬಿಚ್ಚಲು ಒಂದಾಗಿದ್ದು ಗುರುಭಕ್ತಿಗೆ ಸಾಕ್ಷಿಯಾಗಿದೆ ಎಂದರು.

ಇದಕ್ಕೂ ಮುನ್ನ ಸಿದ್ಧಾರೂಢರ ಸನ್ನಿಧಿಯಿಂದ ವೇದಿಕೆಯವರೆಗೆ ವಿದ್ಯಾರ್ಥಿಗಳು ತಮ್ಮ ನೆಚ್ಚಿನ ಗುರುಮಾತೆಯರ ತಲೆ ಮೇಲೆ ಪುಷ್ಪವೃಷ್ಠಿ ಮಾಡುವ ಮೂಲಕ ಭಕ್ತಿಯಿಂದ ಸ್ವಾಗತ ಕೋರಿದರು. ಸಹಜಯೋಗಿ ಸಹಜಾನಂದ ಸ್ವಾಮಿಜಿ ಸಾನಿಧ್ಯ ವಹಿಸಿದ್ದರು. ಬನಶಂಕರಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಶೇಖರ ಅಂಗಡಿ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯದರ್ಶಿ ಶ್ರೀಶೈಲ ಹಳ್ಳಿ, ಮುಖ್ಯ ಶಿಕ್ಷಕಿ ಗೀತಾ ಪಾಟೀಲ, ರಾಜೇಶ್ವರಿ ಕುಳ್ಳೊಳ್ಳಿ, ಬಿಂದುಮಣಿ ಶರ್ಮಾ,
ಜಯಶ್ರೀ ಬಬಲಾದಿ, ಸುಜಾತಾ ಹೊಸಕೇರಿ, ಜ್ಯೋತಿ ಕುರಿ, ಸುವರ್ಣ ಕುಳ್ಳೊಳ್ಳಿ ಅವರನ್ನು ಹಳೆ ವಿದ್ಯಾರ್ಥಿಗಳು ಸನ್ಮಾನಿಸಿ ಗೌರವಿಸಿದರು.

ಶಿಕ್ಷಕಿಯರು ಮತ್ತು ವಿದ್ಯಾರ್ಥಿಗಳು ನೆನಪಿನ ಬುತ್ತಿ ಬಿಚ್ಚಿಕೊಂಡು ಅನಿಸಿಕೆಗಳನ್ನು ಹಂಚಿಕೊಂಡು ಆ ದಿನಗಳನ್ನು ನೆನೆದು ಪುಳಕಿತರಾದರು. ವಿದ್ಯಾರ್ಥಿಗಳು ಹಾಡಿ, ಕುಣಿದು ನಲಿದರು.

ನೆಚ್ಚಿನ ಶಿಕ್ಷಕಿ ಹಾಗೂ ವಿದ್ಯಾರ್ಥಿಗಳೊಂದಿಗೆ ಸೆಲ್ಫಿಗೆ ಮೊರೆ ಹೋದರು. ನಂತರ ಎಲ್ಲರೂ ಸೇರಿ ಸಾಮೂಹಿಕ ಸಹಭೋಜನ ಸವಿದರು.

ಚೇತನ ಕುಂದರಗಿ, ಗಜಾನನ ರೇವಡಗಿ, ತೌಸಿಫ್ ಮಾಲಾಪುರ, ಶಿವಾನಂದ ಬಿಜ್ಜರಗಿ, ಉಮಾ ಗುದಗಿ, ಅಶ್ವಿನಿ ಚಿಂಚಖಂಡಿ, ಶಿವಾನಂದ ಅನಂತಪುರ, ಸಂತೋಷ ನೀಲಾಕರ, ನವೀನ ಹಳ್ಳಿ, ಶಿವರಾಜ ಕಡಬಲ್ಲವರ ಸಮಾರಂಭವನ್ನು ಸಂಘಟಿಸಿದ್ದರು.

## ಸುಜಯ ಚಮಕೇರಿ ಸಾಧನೆ



**ಮಹಾಲಿಂಗಪುರ :** ಹೈದರಾಬಾದಿನ ಶ್ರೀ ಚೈತನ್ಯ ಪಿಯು ವಿಜ್ಞಾನ ಕಾಲೇಜಿನ ವಿದ್ಯಾರ್ಥಿ, ಸ್ಥಳೀಯ ಪುರಸಭೆ ಸದಸ್ಯ ಬಸವರಾಜ ಚಮಕೇರಿ ಅವರ ಪುತ್ರ ಸುಜಯ ಈತನು ಪಿಯುಸಿ ಪ್ರಥಮ ವರ್ಷದಲ್ಲಿ ತೆಲಂಗಾಣ ರಾಜ್ಯದ ಮಧ್ಯಂತರ ಸಾರ್ವಜನಿಕ ಪರೀಕ್ಷೆಯಲ್ಲಿ 99 % ರಷ್ಟು ಅಂಕಗಳನ್ನು ಪಡೆದು ಅತ್ಯುತ್ತಮ ಸಾಧನೆ ಮಾಡಿದ್ದಾನೆ. ಆತನಿಗೆ ಧಡಲ್ ಬಾಜಿ ಕನ್ನಡ ದಿನಪತ್ರಿಕೆಯ ಬಳಗದಿಂದ ಹಾರ್ದಿಕ ಅಭಿನಂದನೆಗಳು.

## ಪುಸ್ತಕಗಳು ಜೀವಂತಿಕೆಯ ಸಂಕೇತ

**ರಬಕವಿ-ಬನಹಟ್ಟಿ :** ಆಧುನಿಕ ಜಗತ್ತಿನಲ್ಲಿ ಏನೆಲ್ಲಾ ಮರೆಯಾದರೂ ಕೂಡಾ ಪುಸ್ತಕಗಳು ಯಾವತ್ತಿಗೂ ತಮ್ಮ ಸ್ಥಾನವನ್ನು ಉಳಿಸಿಕೊಂಡಿವೆ. ಪುಸ್ತಕಗಳು ಜೀವಂತಿಕೆಯ ಸಂಕೇತವಾಗಿವೆ ಎಂದು ರಬಕವಿ ಬನಹಟ್ಟಿ ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರಾಚಾರ್ಯೆ ಚಂದ್ರಪ್ರಭಾ ಬಾಗಲಕೋಟ ತಿಳಿಸಿದರು.

ಅವರು ಬುಧವಾರ ಬನಹಟ್ಟಿಯ ತಮ್ಮಣ್ಣಪ್ಪ ಚಿಕ್ಕೋಡಿ ಕಾಲೇಜಿನಲ್ಲಿ ವಿಶ್ವ ಪುಸ್ತಕ ದಿನಾಚರಣೆಯ ಅಂಗವಾಗಿ ಹಮ್ಮಿಕೊಂಡ ಪುಸ್ತಕ ಪ್ರದರ್ಶನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಪುಸ್ತಕಗಳಓದುನಮ್ಮವ್ಯಕ್ತಿತ್ವವನ್ನುಬದಲಾವಣೆಮಾಡುತ್ತವೆ.ಪುಸ್ತಕಗಳನ್ನು ಓದುವುದರಿಂದ ಸಾಕಷ್ಟು ಜ್ಞಾನವನ್ನು ಪಡೆದು ಕೊಳ್ಳಬಹುದಾಗಿದೆ. ಪುಸ್ತಕಗಳನ್ನು ಓದುವುದರಿಂದ ಆಯಾ ಸಂದರ್ಭದಲ್ಲಿ ಪರಿಸ್ಥಿತಿಗಳನ್ನು ಅರಿತುಕೊಳ್ಳಲು ಸಾಧ್ಯವಾಗುತ್ತದೆ ಎಂದು ಚಂದ್ರಪ್ರಭಾ ಬಾಗಲಕೋಟ ತಿಳಿಸಿದರು.

ಪ್ರಾಚಾರ್ಯ ಜಿ. ಆರ್. ಜುನ್ನಾಯ್ಕರ್ ಮಾತನಾಡಿ, ವಿದ್ಯಾರ್ಥಿಗಳು ಪಠ್ಯ ಪುಸ್ತಕಗಳ ಜೊತೆಗೆ ಇಂದಿನ ಆಧುನಿಕ ಜಗತ್ತಿಗೆ ಬೇಕಾಗಿರುವ ಸ್ಪರ್ಧಾತ್ಮಕ ಪರೀಕ್ಷೆಯ ಪುಸ್ತಕಗಳನ್ನು ಓದಬೇಕು.

ಗ್ರಂಥಾಲಯದ ಲಾಭವನ್ನು ಪಡೆದುಕೊಂಡವರು
ಜೀವನದಲ್ಲಿ ಸಾಕಷ್ಟು ಉನ್ನತ ಸ್ಥಾನವನ್ನು ಪಡೆದುಕೊಂಡಿದ್ದಾರೆ ಎಂದು ತಿಳಿಸಿದರು.

ಗ್ರಂಥಪಾಲಕ ಶಿವು ಇಟ್ನಾಳ, ಪ್ರಕಾಶ ಕೆಂಗನಾಳ, ಉಜ್ವಲಾ ಬಾಣಕಾರ, , ಶ್ರೀದೇವಿ ನೇಸೂರ, ಮಲ್ಲಿಕಾರ್ಜುನ ಹೂಲಿಕಟ್ಟಿ, ರಮೇಶ ಹೂಗಾರ ಸೇರಿದಂತೆ ಇನ್ನೂ ಅನೇಕ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

## ನಾಟಕಗಳು ಮನುಷ್ಯನ ಜೀವನ ಬದಲಿಸುತ್ತವೆ



**ರಬಕವಿ-ಬನಹಟ್ಟಿ:** ನಾಟಕಗಳು ಮನುಷ್ಯನ ಜೀವನ ಬದಲಿಸುತ್ತವೆ. ಒಂದು ಕಾಲದಲ್ಲಿ ನಾಟಕ, ನೃತ್ಯ, ಜನಪದ ಇನ್ನೂ ಅನೇಕ ನಾಟಕ ರೂಪದಲ್ಲಿ ಕಲೆಗಳಿವೆ ಅವು ಜೀವನದಲ್ಲಿ ಬದಲಾವಣೆ ತರುತ್ತವೆ ಎಂದು ಬಬಲಾದಿಯ ಬಸಯ್ಯ ಹಿರೇಮಠಶ್ರೀಗಳು ಹೇಳಿದರು.

ತಾಲೂಕಿನ ಜಗದಾಳ ಗ್ರಾಮದಲ್ಲಿ ಮಾರುತೇಶ್ವರ ಓಕಳಿ ಹಾಗು ದುರ್ಗಾದೇವಿ ಜಾತ್ರಾ ಮಹೋತ್ಸವದ ಅಂಗವಾಗಿ ಬಸವೇಶ್ವರ ನಾಟ್ಯ ಸಂಘದಿಂದ ಜರುಗಿದ 'ಅರವತ್ತು ಹಳ್ಳಿಯ ಅರಸ' ನಾಟಕ ಉದ್ಘಾಟಿಸಿ ಅವರು ಮಾತನಾಡಿದರು. ಇಂದಿನ ದಿನಗಳಲ್ಲಿ ನಾಟಕಗಳು ಗ್ರಾಮೀಣ ಭಾಗದಲ್ಲಿ ನಶಿಸಿ ಹೋಗುತ್ತಿವೆ. ಹಾಗಾಗಬಾರದು.

ನಾಟಕ ಮತ್ತು ಜಾನಪದ ಗೀತೆಗಳು ಇವತ್ತಿನ ದಿನಮಾನಗಳಲ್ಲಿ ಕೇಳಿ ಬರುತ್ತಿಲ್ಲವೆಂದು ಬೇಸರ ವ್ಯಕ್ತಪಡಿಸಿದರು.

ಗ್ರಾಮೀಣ ಪ್ರದೇಶಗಳಲ್ಲಿ ಜಾತ್ರೆಗಳ ಸಂದರ್ಭ ನಾಟಕಗಳಿದ್ದರೇನೆ ಜಾತ್ರೆ ಎಂಬಂತೆ ಬಿಂಬಿತವಾಗಿದ್ದವು. ಜಗದಾಳ ಗ್ರಾಮದಲ್ಲಿ ಸತತ ನಾಲ್ಕು ದಿನಗಳ ಕಾಲ ನಾಟಕಗಳು ಹಲವರು ಕಲಾವಿದರಿಂದ ಅಭಿನಯಿಸಲ್ಪಡುವುದುಗಮನಾರ್ಹವೆಂದು ಬಸಯ್ಯಸ್ವಾಮಿ ಕಾಡದೇವರಮಠ ಸಂತಸ ವ್ಯಕ್ತಪಡಿಸಿದರು.

ಪ್ರತಿಯೊಂದು ಹಬ್ಬ-ಹರಿದಿನಗಳಲ್ಲಿ ನಾಟಕಗಳ ಪ್ರದರ್ಶನ ನಿರಂತರವಾಗಬೇಕು. ಅಂದಾಗ ಮಾತ್ರ ನಮ್ಮ ದೇಶದ ಸಂಸ್ಕೃತಿ, ಕಲೆ, ಸಾಹಿತ್ಯ ಸಿರಿವಂತಗೊಳಿಸಲು ಸಾಧ್ಯವೆಂದರು.

ಬಸಯ್ಯ ಹಿರೇಮಠ, ಶ್ರೀಶೈಲ ಪಾಟೀಲ, ಸುರೇಶ ಅಸ್ಕಿ, ಸುಭಾಸ ಉಳ್ಳಾಗಡ್ಡಿ, ಗುರಲಿಂಗ ಚಿಂಚಲಿ, ಪಂಡಿತ ಭೋಸಲೆ, ಶಂಕರಯ್ಯ ಪೂಜಾರಿ, ರಾಜು ಅಂಬಲಿ, ಶೇಖರ ನೀಲಕಂಠ, ರಾಘವೇಂದ್ರ ಜಿಡ್ಡಿಮನಿ, ವಿಠ್ಠಲ ಕರಿಗಾರ, ಗುರು ಅಸ್ಕಿ, ಪ್ರವೀಣ ಕೋಲಾರ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

## ಡಿ.ಎಂ. ಸಾವಕಾರ ಅವರಿಗೆ ರಾಜ್ಯ ಮಟ್ಟದ ಪ್ರಶಸ್ತಿ




**ಬಾಗಲಕೋಟೆ :** ಕನ್ನಡ ಜಾನಪದ ಪರಿಷತ್ ಜಿಲ್ಲಾಧ್ಯಕ್ಷ ಡಿ. ಎಂ. ಸಾವಕಾರ ಅವರಿಗೆ
ಅಂತಾರಾಷ್ಟ್ರೀಯ ಖ್ಯಾತಿಯ ಜಾನಪದ ವಿದ್ವಾಂಸ, ಜಾನಪದ ಭೀಷ್ಮ
ಜೀಶಂಪ ಎಂದೇ ಖ್ಯಾತರಾಗಿದ್ದ ಡಾ. ಜೀ. ಶಂ. ಪರಮಶಿವಯ್ಯ ರಾಜ್ಯ ಮಟ್ಟದ ಪ್ರಶಸ್ತಿಯನ್ನು
ಶೃಂಗೇರಿಯ ಶಾಸಕ, ಕೆಆರ್ ಐಡಿಬಿಎಲ್ ನಿಗಮದ ಅಧ್ಯಕ್ಷ ಟಿ. ಡಿ. ರಾಜೇಗೌಡ್ರು ಇತ್ತೀಚೆಗೆ ಪ್ರದಾನ ಮಾಡಿದರು.

ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ನಗರದ ದಾಸಮಠ ಹಲ್ಲಮಕ್ಕಿಯಲ್ಲಿ ಜರುಗಿದ ಕನ್ನಡ ಜಾನಪದ ಪರಿಷತ್ ದಶಮಾನೋತ್ಸವ ಹಾಗೂ ಜೀಶಂಪ ರಾಜ್ಯ ಪ್ರಶಸ್ತಿ ಪ್ರದಾನ ಸಮಾರಂಭದಲಿ ಪ್ರಶಸ್ತಿ ನೀಡಿ ಗೌರವಿಸಿದರು.

ಹುಲ್ಮಕ್ಕಿ ದಾಸಮಠದ ಗುಣನಾಥ ಸ್ವಾಮೀಜಿ,
ಕನ್ನಡ ಜಾನಪದ ಪರಿಷತ್ ರಾಜ್ಯಾಧ್ಯಕ್ಷ ಡಾ. ಎಸ್. ಬಾಲಾಜಿ, ಚಿಕ್ಕಮಗಳೂರು ಕಸಾಪ ಜಿಲ್ಲಾಧ್ಯಕ್ಷ ಸೂರಿ ಶ್ರೀನಿವಾಸ, ಓಣಿತೋಟ ರತ್ನಾಕರ, ಕೆ. ಸಿ. ಕಾಂತಪ್ಪ, ನವೀನಕುಮಾರ, ವಿಶಾಲಾಕ್ಷಮ್ಮ, ಕೆ. ಆರ್.
ಚಂದ್ರಶೇಖರ, ಕುಂಚೂರು ಶ್ರೀನಿವಾಸನ್, ಆರ್. ಬಿ. ನಬಿವಾಲೆ, ಸುರೇಶ ವಸ್ತ್ರದ ಸೇರಿದಂತೆ ಇನ್ನೂ ಅನೇಕ ಗಣ್ಯರು ಉಪಸ್ಥಿತರಿದ್ದರು.

# ಮಹಿಳೆಯರು ಸ್ವಾವಲಂಬಿಯಾಗಲು ತರಬೇತಿ ಸಹಕಾರಿ: ಹಿರೇ ಶೆಲ್ಲಿಕೇರಿ ಗ್ರಾಮದ 35 ಮಹಿಳೆಯರಿಗೆ ಅಗರಬತ್ತಿ ತರಬೇತಿ

**ಕಲಾದಗಿ** : ಮಹಿಳೆಯರ ಸ್ವಾವಲಂಬಿ ಜೀವನ ನಡೆಸಲು ತರಬೇತಿ ಯೋಜನೆಗಳು ಸಹಕಾರಿಯಾಗಿದೆಎಂದುಬಿ.ವಿ.ವಿ ಸಂಘ. ಕೋಟಕ್ ಮಹೀಂದ್ರಾ ಬ್ಯಾಂಕ್. ಆರ್ ಸೆಟ್ ಸಂಸ್ಥೆ. ನಿರ್ದೇಶಕಶರಣಬಸಪ್ಪಹುನೂರ ಹೇಳಿದರು . ಬಿ.ವಿ.ವಿ ಸಂಘ. ಕೋಟಕ್ ಮಹೀಂದ್ರಾ ಬ್ಯಾಂಕ್. ಆರ್ ಸೆಟ್ ಸಂಸ್ಥೆ. ಆಶ್ರಯದಲ್ಲಿ ಸಮೀಪದ ಹಿರೇ ಶೆಲ್ಲಿಕೇರಿ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಅಗರಬತ್ತಿ ಗೃಹ ಉದ್ಯೋಗ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು ನಿರುದ್ಯೋಗವನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಮಹಿಳೆಯರು ಸ್ವಾವಲಂಬಿ



ಜೀವನ ನಡೆಸಲು ಮಹಿಳೆಯರು ಸ್ವಾವಲಂಬಿಯಾಗಲು ಮನೆಯಲ್ಲಿ ಉಪ ಕಸುಬುಗಳನ್ನು ಮಾಡಲು ಸರ್ಕಾರ ಇಂಥ ತರಬೇತಿ ಯೋಜನೆಗಳನ್ನು ಜಾರಿಗೆ ತಂದಿದೆ. ಈ ನಮ್ಮ ಸಂಸ್ಥೆಯಿಂದ ಮೇಣದಬತ್ತಿ ತಯಾರಿಕೆ. ಹೈನುಗಾರಿಕೆ ಎರೆಹುಳ ಗೊಬ್ಬರ ತಯಾರಿಕೆ. ಹೊಲಗಿ ತರಬೇತಿ. ಇಂತಹ 65 ತರಬೇತಿಗಳನ್ನು ನೀಡಲಾಗುತ್ತಿದೆ. ನಮ್ಮ ಸಂಸ್ಥೆಯಲ್ಲಿತರಬೇತಿ ಪಡೆದ 32 ಸಾವಿರ ಅಧಿಕ ಜನರು ಸ್ವಯಂ ಉದ್ಯೋಗವನ್ನು ಮಾಡುತ್ತಿದ್ದಾರೆ. ತಾವುಗಳು ಕೂಡ ತರಬೇತಿಯನ್ನು ಪಡೆದುಕೊಂಡು ಮನೆಯಲ್ಲಿ ಸುಮ್ಮನೆ ಕಾಲ ಹರಣ ಮಾಡುವುದನ್ನು ಬಿಟ್ಟು ಸ್ವಯಂ ಉದ್ಯೋಗ ಮಾಡಿ. ಗ್ರಾಮದ ಮಹಿಳೆಯರು ಕೌಶಲ್ಯ ತರಬೇತಿಗಳನ್ನು ಪಡೆದು ಸ್ವಯಂ ಉದ್ಯೋಗ ಮಾಡಲಿ ಎನ್ನುವ ಮಹತ್ವದ ಉದ್ದೇಶದಿಂದ ಗ್ರಾಮದಲ್ಲಿ ಮಹಿಳೆಯರಿಗೆ ತರಬೇತಿ ಕೊಡಿಸುತ್ತಿರುವುದು ಪಕೀರಪ್ಪ ಅವರ ಕಾರ್ಯ ನಿಜಕ್ಕೂ ಅಭಿನಂದನೆಯವಾಗಿದೆ ಎಂದರು.

ಸಂಸ್ಥೆಯ ಕಾರ್ಯನಿರ್ವಾಹಕ ಡಾ. ಬಿ.ಎಸ್ ಅಂಗಡಿ ಕಾರ್ಯಕ್ರಮ ಅಧ್ಯಕ್ಷತೆ ವಹಿಸಿ ಮಾತನಾಡಿ. ಜೀವನದಲ್ಲಿ ಬದಲಾವಣೆ ತರಲು ಈ ಕೌಶಲ್ಯ ತರಬೇತಿ ಸಹಕಾರಿಯಾಗಿದೆ. ಮಹಿಳೆಯರು ಪಾವಲಂಬಿ ಜೀವನ ನಡೆಸಲು ಮಹತ್ವದ ಉದ್ದೇಶದಿಂದ ಸರ್ಕಾರ ಈ ತರಬೇತಿ ಯೋಜನೆಯನ್ನು ಜಾರಿಗೆ ತಂದಿದೆ. ಮನೆ ಕೆಲಸದ ಜೊತೆಗೆಇಂತಹಉಪಕಸುಗಳನ್ನು ಮಾಡಿ ಆರ್ಥಿಕವಾಗಿ ತಮ್ಮ ಮಕ್ಕಳ ಶೈಕ್ಷಣಿಕವಾಗಿ ಬಲಿಷ್ಠರಾಗಿ ಎಂದರು.

ಜಿಲ್ಲಾ ಮಟ್ಟದ ಜಾಗೃತಿ ಮತ್ತು ಉಸ್ತುವಾರಿ ಸಮಿತಿಯ ನಾಮನಿರ್ದೇಶನಸದಸ್ಯಪಕೀರಪ್ಪ ಮಾದರ. ಪತ್ರಕರ್ತರಾದ ಎಸ್. ಆರ್. ಭಾವಖಾನ. ಎಂ.ಎಚ್. ನದಾಫ್. ನಿತೀಶ ಪಾಟೀಲ್ ಇದ್ದರು. ಪವಿತ್ರ ಜಕ್ಕಪ್ಪನವರ ಕಾರ್ಯಕ್ರಮ ನಿರೂಪಿಸಿ ಸ್ವಾಗತಿಸಿ ವಂದಿಸಿದರು.

# ಮಹಿಳೆಯರ ಸಬಲೀಕರಣಕ್ಕಾಗಿ ಉಚಿತ ಹೊಲಿಗೆ ತರಬೇತಿ ಶಿಬಿರ–ಉಮಾ ತಂಬ್ರಳ್ಳಿ



**ಕೊಪ್ಪಳ** : ಬಡ ಹಿಂದುಳಿದ ಮಹಿಳೆಯರ ಆರ್ಥಿಕ ಸಬಲೀಕರಣಕ್ಕಾಗಿ ಅವರಲ್ಲಿ ಕೌಶಲ್ಯ ಅಭಿವೃದ್ಧಿ ಉತ್ತೇಜಿಸಲು ಉಚಿತವಾಗಿ ಹೊಲಿಗೆ ತರಬೇತಿ ನೀಡಲು ವ್ಯವಸ್ಥೆ ಮಾಡಲಾಗಿದೆ ಎಂದು ಕೊಪ್ಪಳ ಇನ್ನರ್ ವೀಲ್ ಕ್ಲಬ್ ಅಧ್ಯಕ್ಷರಾದ ಉಮಾ ಮಹೇಶ್ ತಂಬ್ರಳ್ಳಿ ಹೇಳಿದರು

ಅವರು ನಗರದಲ್ಲಿ ಕೊಪ್ಪಳ ಇನ್ನರ್ ವೀಲ್ ಕ್ಲಬ್ ವತಿಯಿಂದ ಬಡ ಹಿಂದುಳಿದ ಮಹಿಳೆಯರಿಗಾಗಿ ಏರ್ಪಡಿಸಿದ ಉಚಿತ ಹೊಲಿಗೆ ತರಬೇತಿ ಶಿಬಿರದ ಪ್ರಾರಂಭೋತ್ಸವ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು,

ಮಹಿಳೆಯರು ಇದರ ಸದುಪಯೋಗ ಪಡೆದುಕೊಳ್ಳಬೇಕು ಹೊಲಿಗೆ ಮತ್ತು ಟೈಲರಿಂಗ್ ತಂತ್ರಗಳನ್ನುಕಲಿಯುವಮೂಲಕಸ್ವಯಂಉದ್ಯೋಗ ಅವಕಾಶಗಳನ್ನು ಪಡೆದುಕೊಂಡು ತನ್ನ ಕುಟುಂಬದ ಆರ್ಥಿಕ ಸಬಲೀಕರಣಕ್ಕಾಗಿ ಶ್ರಮಿಸಿ ಕುಟುಂಬದ ನಿರ್ವಹಣೆ ಮಾಡಿಕೊಳ್ಳಬೇಕು ಎಂದ ಅವರು ಬಡ ಮಹಿಳೆಯರ ಆರ್ಥಿಕ ಸಬಲೀಕರಣಕ್ಕಾಗಿ ನಮ್ಮ ಕೊಪ್ಪಳ ಇನ್ನರ್ ವಿಲ್ ಕ್ಲಬ್ ಸಂಸ್ಥೆ ಸದಾ ಸಿದ್ಧವಾಗಿ ಶ್ರಮಿಸುತ್ತಿದೆ ಎಂದು ಅಧ್ಯಕ್ಷರಾದ ಉಮಾ ಮಹೇಶ್ ತಂಬ್ರಳ್ಳಿ ಹೇಳಿದರು,

ಮಹಿಳೆಯರಿಗೆ ಟೈಲರಿಂಗ್ ತರಬೇತಿ ಬಗ್ಗೆ ಸಂಸ್ಥೆಯ ಸದಸ್ಯ ಪದಾಧಿಕಾರಿಗಳಾದ ಮಾಜಿ ಅಧ್ಯಕ್ಷರಾದ ಶರಣಮ್ಮ ಪಾಟೀಲ್, ರೇಖಾ ಕಡ್ಲಿ ಮತ್ತು ಅನಿತಾ ಬಜಾರ್ ಮಠ ರವರು ಮಹಿಳೆಯರಲ್ಲಿ ಕೌಶಲ್ಯ ಅಭಿವೃದ್ಧಿ ಬೆಳೆಸಲು ಮತ್ತು ಸಮುದಾಯದ ಉನ್ನತಿಗಾಗಿ ಟೈಲರಿಂಗ್ ತರಬೇತಿ ಯಂತ್ರಗಳ ಬಗ್ಗೆ ತರಬೇತಿ ಮತ್ತು ಮಾಹಿತಿ ನೀಡಿದರು,

ಈ ಸಂದರ್ಭದಲ್ಲಿ ಕೊಪ್ಪಳ ಇನ್ನರ್ ವೀಲ್ ಕ್ಲಬ್ ಕಾರ್ಯದರ್ಶಿ ಮೀನಾಕ್ಷಿ ಬಣ್ಣದ ಬಾವಿ, ಉಪಾಧ್ಯಕ್ಷರಾದ ಮಧು ಶೆಟ್ಟರ್, ಸಂಪಾದಕಿ ನಾಗವೇಣಿ ಗರೋರ್, ಮತ್ತು ಮಮತಾ ಶೆಟ್ಟರ್ ,ಅಲ್ಲದೆ ಕಾರ್ಯಕಾರಿ ಸಮಿತಿ ಸದಸ್ಯರಾದ ಡಾ ರಾಧಾ ಕುಲಕರ್ಣಿ ಸೇರಿದಂತೆ ಟೈಲರಿಂಗ್ ತರಬೇತಿ ಪಡೆಯುವ ಮಹಿಳಾ ಶಿಬಿರಾರ್ಥಿಗಳು ಪಾಲ್ಗೊಂಡಿದ್ದರು.

# ಶಂಕರಾಚಾರ್ಯ, ಭಗೀರಥ ಹಾಗೂ ಹೇಮರೆಡ್ಡಿ ಮಲ್ಲಮ್ಮ ಜಯಂತಿ: ಪೂರ್ವಭಾವಿ ಸಭೆ ಮಹನಿಯರ ಜಯಂತಿಗಳಿಗೆ ಅಗತ್ಯ ಸಿದ್ಧತೆ ಕೈಗೊಳ್ಳಿ: ಎಸಿ ಕಛೇರಿ ತಹಶಿಲ್ದಾರ ರಜನಿಕಾಂತ್

**ಕೊಪ್ಪಳ:** ಜಿಲ್ಲಾಡಳಿತ ಮತ್ತು ಕನ್ನಡ ಸಂಸ್ಕೃತಿ ಇಲಾಖೆ ವತಿಯಿಂದ ಜಿಲ್ಲಾ ಕೇಂದ್ರದಲ್ಲಿ ಮೇ.2 ರಂದು ಶ್ರೀ ಶಂಕರಾಚಾರ್ಯ ಜಯಂತಿ ಮತ್ತು ಮೇ.4 ರಂದು ಶ್ರೀ ಭಗೀರಥ ಜಯಂತಿ ಹಾಗೂ ಮೇ. 10 ರಂದು ಶ್ರೀ ಶಿವ ಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತಿಯನ್ನು ಹಮ್ಮಿಕೊಳ್ಳಲಾಗಿದ್ದು, ಈ ಎಲ್ಲಾ ಮಹನಿಯರ ಜಯಂತಿ ಕಾರ್ಯಕ್ರಮಕ್ಕೆ ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳುವಂತೆ ಸಹಾಯಕ ಆಯುಕ್ತರ ಕಚೇರಿಯ ತಹಶಿಲ್ದಾರ ರಜನಿಕಾಂತ್ ಹೇಳಿದರು.

ಅವರು ಮಂಗಳವಾರ ಸಹಾಯಕ ಆಯುಕ್ತರ ಕಚೇರಿ ಸಭಾಂಗಣದಲ್ಲಿ ಮಹನಿಯರ ಜಯಂತಿ ಆಚರಣೆ ಕುರಿತಂತೆ ಆಯೋಜಿಸಲಾಗಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು.

ಜಿಲ್ಲೆಯ ಎಲ್ಲಾ ಸರ್ಕಾರಿ ಕಚೇರಿಗಳು, ತಾಲ್ಲೂಕು ಕೇಂದ್ರಗಳಲ್ಲಿ ಮತ್ತು ಗ್ರಾಮ ಪಂಚಾಯತಗಳಲ್ಲಿ, ಶಾಲಾ, ಕಾಲೇಜು ವಸತಿ ನಿಲಯಗಳಲ್ಲಿ ಈ ಎಲ್ಲಾ ಮಹನಿಯರ ಜಯಂತಿಗಳನ್ನು ಕಡ್ಡಾಯವಾಗಿ ಆಚರಣೆ ಮಾಡಬೇಕಾಗಿದ್ದು,

ಈ ಬಗ್ಗೆ ಸಂಬಂಧಿಸಿದ ಅಧಿಕಾರಿಗಳು ಕ್ರಮ ವಹಿಸಬೇಕು ಎಂದರು.



ಜಿಲ್ಲಾ ಕೇಂದ್ರದಲ್ಲಿ ಮೇ 2 ರಂದು ಶ್ರೀ ಶಂಕರಾಚಾರ್ಯರ ಜಯಂತಿ ಆಚರಣೆಗಾಗಿ ಸಂಬಂಧಿಸಿದ ವಿವಿಧ ಇಲಾಖೆಗಳ ಅಧಿಕಾರಿಗಳು ಕಾರ್ಯಕ್ರಮಕ್ಕೆ ಅಚ್ಚುಕಟ್ಟು ವ್ಯವಸ್ಥೆ ಕಲ್ಪಿಸಬೇಕು.

ಅಂದು ಬೆಳಿಗ್ಗೆ 11 ಗಂಟೆಗೆ ಕೊಪ್ಪಳ ನಗರದ ಶಂಕರ ಸಾಂಸ್ಕೃತಿಕ ಭವನದಲ್ಲಿ ವೇದಿಕೆ ಕಾರ್ಯಕ್ರಮನಡೆಯಲಿದ್ದು,ಸಂಜೆ5ಗಂಟೆಗೆ ನಗರದ ಶಂಕರ ಸಾಂಸ್ಕೃತಿಕ ಭವನದಿಂದ ಗಡಿಯಾರ ಕಂಬ ಮುಖಾಂತರ ಜವಾಹರ ರಸ್ತೆಮಾರ್ಗವಾಗಿ ಪುನಃ ಶಂಕರ ಸಾಂಸ್ಕೃತಿಕ ಭವನದವರೆಗೆ ಶ್ರೀಶಂಕರಾಚಾರ್ಯ ಭಾವಚಿತ್ರದ ಮೆರವಣಿಗೆ ನಡೆಯಲಿದೆ. ಶ್ರೀ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತಿ ನಿಮಿತ್ತ ಮೇ.10 ರಂದು ಬೆಳಿಗ್ಗೆ 11 ಗಂಟೆಗೆ ಕೊಪ್ಪಳದ ಕಿನ್ನಾಳ ರಸ್ತೆಯ ಶ್ರೀ ಹೇಮರೆಡ್ಡಿ ಮಲ್ಲಮ್ಮ ದೇವಸ್ಥಾನದಲ್ಲಿ ವೇದಿಕೆ ಕಾರ್ಯಕ್ರಮ ಜರುಗಲಿದ್ದು, ಈ ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ಸ್ವಚ್ಛತೆ, ಕುಡಿಯುವ ನೀರಿನ ವ್ಯವಸ್ಥೆಯನ್ನು ನಗರಸಭೆ ಕಲ್ಪಿಸಬೇಕು. ವೇದಿಕೆ ಅಲಂಕಾರ, ಗಣ್ಯರಿಗೆ ಪುಸ್ತಕ ವಿತರಣೆ, ಪೂಜೆಗೆ ಹೂವು, ಹಾರಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಒದಗಿಸಬೇಕು. ಪೊಲೀಸ್ ಇಲಾಖೆಯಿಂದ ಮೆರವಣಿಗೆ ಹಾಗೂ ವೇದಿಕೆ ಕಾರ್ಯಕ್ರಮ ನಡೆಯುವಭವನದಲ್ಲಿಸೂಕ್ತಬಂದೋಬಸ್ತ್ ಒದಗಿಸಬೇಕು ಎಂದರು.

ಶಿಷ್ಠಾಚಾರದಂತೆ ಆಮಂತ್ರಣ ಪತ್ರಿಕೆ, ಗಣ್ಯರ ಆಹ್ವಾನಕ್ಕೆ ಸಂಬಂಧಿಸಿದ ತಹಶೀಲ್ದಾರರು ಕ್ರಮ ವಹಿಸಬೇಕು. ಉಳಿದಂತೆ ಸಂಬಂಧಿಸಿದ ಇಲಾಖೆಗಳು ಪರಸ್ಪರ ಸಮನ್ವಯದೊಂದಿಗೆ ಜಯಂತಿ ಆಚರಣೆಗೆ ಅಚ್ಚುಕಟ್ಟು ವ್ಯವಸ್ಥೆ ಕಲ್ಪಿಸಬೇಕು. ವೇದಿಕೆ ಕಾರ್ಯಕ್ರಮದಲ್ಲಿ ನಾಡಗೀತೆಗಾಗಿ ಕಲಾವಿದರು ಹಾಗೂ ಉಪನ್ಯಾಸ ನೀಡಲು ಉಪನ್ಯಾಸಕರನ್ನು ಆಯ್ಕೆ ಮಾಡಿ ಅವರನ್ನು ಆಹ್ವಾನಿಸಬೇಕು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿಗಳಿಗೆ ತಿಳಿಸಿದರು.

ಮೇ 4 ರಂದು ಶ್ರೀ ಭಗೀರಥ ಜಯಂತಿ ಆಚರಣೆ: ಶ್ರೀ ಭಗೀರಥ ಜಯಂತಿಯನ್ನು ಮೇ.4 ರಂದು ಪ್ರತಿ ವರ್ಷದಂತೆ ಈ ವರ್ಷವು ಆಚರಣೆಯನ್ನು ಮಾಡಬೇಕು. ಇದಕ್ಕೆ ಅಗತ್ಯ ಸಿದ್ದತೆಗಳನ್ನು ಕೈಗೊಳ್ಳುವಂತೆ ಅವರು ಹೇಳಿದರು.

ಈ ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಕೊಟ್ರೇಶ ಮರಬನಳ್ಳಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕ ಡಾ. ಸುರೇಶ ಜಿ., ಆರೋಗ್ಯ ಇಲಾಖೆಯ ಶಿವಾನಂದ ವ್ಹಿ.ಪಿ, ಶ್ರೀ ಶಂಕರಾಚಾರ್ಯ ಸಮಾಜದ ಜಿಲ್ಲಾಧ್ಯಕ್ಷರಾದ ಡಿ.ವಿ ಜೋಷಿ, ಸಮಾಜದ ಮುಖಂಡರಾದ ರವಿ ಪುರೋಹಿತ, ರಮೇಶ, ಕೆ., ಅಶೋಕ, ವಿ ಮತ್ತು ರೆಡ್ಡಿ ಸಮಾಜದ ಮುಖಂಡರಾದ ಹನುಮ ರೆಡ್ಡಿ, ಶಂಕರಗೌಡ, ಕಾಶೀನಾಥ್ ರೆಡ್ಡಿ, ವಿರೂಪಾಕ್ಷಪ್ಪ, ನಾಗರಾಜ, ಹಾಗೂ ಭಗೀರಥ ಸಮಾಜದ ಜಿಲ್ಲಾಧ್ಯಕ್ಷರಾದ ಯಲ್ಲಪ್ಪ ಗದ್ದಿ, ಮುಖಂಡರಾದ ವೆಂಕಟೇಶ ಬ್ಯಾಡಗಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಪ.ಪಂಗಡದ ಇಂಜಿನಿಯರಿಂಗ್ ಪದವೀಧರರಿಗೆ ಶಿಷ್ಯವೇತನದೊಂದಿಗೆ ತರಬೇತಿಗೆ: ಮರು ಅರ್ಜಿ ಆಹ್ವಾನ

**ಕೊಪ್ಪಳ** : ಸಮಾಜ ಕಲ್ಯಾಣ ಇಲಾಖೆಯಿಂದ ಐಐಎಸ್ಸಿ, ಐಐಟಿ ಮತ್ತು ಎನ್.ಐ.ಟಿ ಸಂಸ್ಥೆಗಳ ಮೂಲಕ ಆರ್ಟಿಫೀಷಿಯಲ್ ಇನ್‌ಟೆಲಿಜೆನ್ಸ್ & ಮಷಿನ್ ಲರ್ನಿಂಗ್ (Artificial Intelligence and Machine Learning) ನಂತಹ ವೃತ್ತಿಪರ ಕೋರ್ಸಗಳಲ್ಲಿ ಭಾಗವಹಿಸುವ ಪರಿಶಿಷ್ಟ ಪಂಗಡದ 200 ಇಂಜಿನಿಯರಿಂಗ್ ಪದವೀಧರರಿಗೆ ಶಿಷ್ಯವೇತನದ ಜೋತೆಗೆ ತರಬೇತಿ ನೀಡುವ ಸಂಬಂಧ ಮರು ಅರ್ಜಿ ಸಲ್ಲಿಸಲು ಕೋರಲಾಗಿದೆ.

ಐಐಎಸ್.ಸಿ, ಐಐಟಿ ಮತ್ತು ನೀಟ್ ಸಂಸ್ಥೆಗಳ ಮೂಲಕ ಆರ್ಟಿಫೀಷಿಯಲ್ ಇನ್‌ಟೆಲಿಜೆನ್ಸ್ & ಮಷಿನ್ ಲರ್ನಿಂಗ್ ನಂತಹ ವೃತ್ತಿಪರ ಕೋರ್ಸಗಳಲ್ಲಿ ಭಾಗವಹಿಸುವ ಪರಿಶಿಷ್ಟ ಪಂಗಡದ 200 ಇಂಜಿನಿಯರಿಂಗ್ ಪದವೀಧರರಿಗೆ ರೂ. 15,000 ಗಳ ಶಿಷ್ಯವೇತನದ ಜೋತೆಗೆ ತರಬೇತಿ ನೀಡಲಾಗುವುದೆಂದು ಬೆಂಗಳೂರು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ನಿರ್ದೇಶಕರು ಕೆಲವು ಷರತ್ತುಗಳಿಗೊಳೋಂದಿಗೆ ಮಂಜೂರಾತಿ ನೀಡಿ ಆದೇಶಿಸಿದ್ದಾರೆ.

ಕೊಪ್ಪಳ ಜಿಲ್ಲೆಯ ಅರ್ಹ ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳಲು ತಿಳಿಸಲಾಗಿದೆ.

ಏಪ್ರಿಲ್ 25 ರವರೆಗೆ ಅರ್ಜಿಗಳನ್ನು ಸ್ವೀಕರಿಸಿ ಪರಿಶೀಲಿಸಿ ಕೇಂದ್ರ ಕಛೇರಿಗೆ ಸಲ್ಲಿಸಬೇಕಾಗಿದ್ದು, ಹೆಚ್ಚಿನ ಮಾಹಿತಿಗಾಗಿ ಮತ್ತು

ಅರ್ಜಿಗಳನ್ನು ಪಡೆಯಲು ಕೊಪ್ಪಳ ಜಿಲ್ಲೆಯ ಆಯಾ ತಾಲೂಕಿನ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಮತ್ತು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರುಗಳನ್ನು ಸಂಪರ್ಕಿಸುವಂತೆ ಕೊಪ್ಪಳ ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರ ಪ್ರಕಟಣೆ ತಿಳಿಸಿದೆ.

# ಮಕ್ಕಳ ಸಾಹಿತ್ಯ ಮಕ್ಕಳ ಭಾವನೆಯನ್ನು ಉದಾತ್ತಗೊಳಿಸುತ್ತದೆ

**ಧಾರವಾಡ** : ಮಕ್ಕಳ ಮನಸ್ಸನ್ನು ಅರಳಿಸಿ ಅದರಲ್ಲಿಕುತೂಹಲ ಕೆರಳಿಸುವ ಸಾಹಿತ್ಯವೇ ಮಕ್ಕಳ ಸಾಹಿತ್ಯ. ಈ ಸಾಹಿತ್ಯ ಮಕ್ಕಳ ಭಾವನೆಯನ್ನು ಉದಾತ್ತಗೊಳಿಸುತ್ತದೆ ಎಂದು ಆಕಾಶವಾಣಿ ಧಾರವಾಡ ಕೇಂದ್ರದಕಾರ್ಯಕ್ರಮದ ಮುಖ್ಯಡಾ.ಶರಣಬಸವ ಚೋಳಿನ ಅಭಿಪ್ರಾಯಪಟ್ಟರು.

ಕರ್ನಾಟಕ ವಿದ್ಯಾವರ್ಧಕ ಸಂಘವು, ಕವಿ.ಬಿ.ಕೆ. ಹೊಂಗಲ ದತ್ತಿ ಅಂಗವಾಗಿ ಆಯೋಜಿಸಿದ್ದ ಮಕ್ಕಳ ಶ್ರೇಷ್ಠ ಕವಿ ಪ್ರಶಸ್ತಿ–2025 ಪ್ರದಾನ ಹಾಗೂ ಉಪನ್ಯಾಸ' ಕಾರ್ಯಕ್ರಮದಲ್ಲಿಮಕ್ಕಳ ಸಾಹಿತ್ಯ' ವಿಷಯಕುರಿತುಅವರು ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದಅವರು, ಕನ್ನಡದಲ್ಲಿ ಮಕ್ಕಳ ಸಾಹಿತ್ಯದ ಬೇರುಗಳನ್ನು ಜಾನಪದ ಪರಂಪರೆಯಲ್ಲಿ ವಿಫುಲವಾಗಿ ಕಾಣಬಹುದು.ಜಾನಪದ ಪರಂಪರೆಯ ಗೋವಿನ ಹಾಡು, ಪಂಜೇ ಮಂಗೇಶರಾಯರ 'ನಾಗರ ಹಾವೇ! ಹಾವೊಳು ಹೂವೆ!'ಎಂಬ ಹಾಡು ಇಂದಿಗೂ



ಮಕ್ಕಳನ್ನು ಮಂತ್ರ ಮುಗ್ಧರನ್ನಾಗಿಸುತ್ತವೆ. ದುರ್ಗಸಿಂಹನ ಪಂಚತಂತ್ರದ ಕಥೆಗಳು, ಈಸೋಪನ ನೀತಿಯ ಕಥೆಗಳು ಮಕ್ಕಳಲ್ಲಿ ಉದಾತ್ತಚಿಂತನೆ, ನೈತಿಕ ಮೌಲ್ಯ ಬಿತ್ತುತ್ತವೆ. ಶಂ.ಗು.ಬಿರಾದರ,ಆನಂದಪಾಟೀಲಮಕ್ಕಳ ಹಾಡುಗಳು ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಬದ್ಧತೆಕಲ್ಪನಾಶಕ್ತಿ ಪ್ರಚೋದಿಸುತ್ತವೆ.

ಇಂದಿನ ಸಂಕೀರ್ಣ ಪರಿಸ್ಥಿತಿಯಲ್ಲಿ ಮಕ್ಕಳು ಭಯದ ವಾತಾವರಣದಲ್ಲಿ ಬೆಳೆಯದೇ ಸಾಹಿತ್ಯಓದುವ, ರಚನೆ ಮಾಡುವ ಒಳ್ಳೆಯ ಹವ್ಯಾಸವನ್ನು ಬಾಲ್ಯದಿಂದಲೇ ಪಾಲಕರು ಬೆಳೆಸಬೇಕು.ಧಾರವಾಡ ಆಕಾಶವಾಣಿ ಆ ದೆಸೆಯಲ್ಲಿ ಮಕ್ಕಳಿಗಾಗಿ ಅನೇಕ ಮೋಹಕ ಕಾರ್ಯಕ್ರಮಗಳನ್ನು ಬಿತ್ತರಿಸುತ್ತ ಬಂದಿದೆ. ಮಕ್ಕಳಲ್ಲಿ ಸಂಸ್ಕೃತಿ, ಸಾಂಸ್ಕೃತಿಕ ಪರಂಪರೆ ಬೆಳೆಸುವುದು ಇಂದಿನ ಅಗತ್ಯವಾಗಿದೆಎಂದರು.

2025ರ ಮಕ್ಕಳ ಶ್ರೇಷ್ಠ ಕವಿ ಪ್ರಶಸ್ತಿ ಸ್ವೀಕರಿಸಿ, ಮಕ್ಕಳ ಸಾಹಿತಿಡಾ.ರುದ್ರಣ್ಣಚಿಲುಮಿ ಮಾತನಾಡಿ, ಈ ಪ್ರಶಸ್ತಿ ನನಗೆ ಬಯಸದೇ ಬಂದ ಭಾಗ್ಯವಾಗಿದೆ.ಮಕ್ಕಳ ಸಾಹಿತ್ಯ ಇನ್ನೂ ವಿಫುಲವಾಗಿ ಬೆಳೆದು ಬರಬೇಕಿದೆ. ಜಾನಪದದಗರತಿಯ ಹಾಡುಗಳು ಮಕ್ಕಳ ಸಾಹಿತ್ಯವಾಗಿದೆಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಸಾಮಾಜಿಕ ಕಾರ್ಯಕರ್ತ ಗಂಗಾಧರ ದೊಡವಾಡ ಮಾತನಾಡಿ, ಕರ್ನಾಟಕ ವಿದ್ಯಾವರ್ಧಕ ಸಂಘ ಈ ನಾಡಿನ ಸಾಹಿತ್ಯ ಹಾಗೂ ಸಂಸ್ಕೃತಿ ಉಳುವಿಗೆ ನಿರಂತರವಾಗಿ ಶ್ರಮಿಸುತ್ತಿದೆ. ಮಕ್ಕಳಿಗೆ ಆಂಗ್ಲಭಾಷಾ ಮಾಧ್ಯಮಕಲಿಕೆಗಿಂತ ಸಾಹಿತ್ಯಕಡೆಗೆ ಒಲವು ಮೂಡಿಸಬೇಕೆಂದು ಹೇಳಿದರು.

ಕವಿ ಬಿ.ಕೆ.ಹೊಂಗಲ್ ಮಕ್ಕಳ ಸಾಹಿತ್ಯದತಮ್ಮಅನುಭವಹಂಚಿಕೊಂಡರು. ವೇದಿಕೆಯಲ್ಲಿದತ್ತಿದಾನಿ ಸೋಮನಾಥ ಹೊಂಗಲ ಇದ್ದರು.

ಕೆಲಗೇರಿಯ ಸಂಗಮೇಶ್ವರಜಾನಪದ ಮಹಿಳಾ ಸಂಘದ ಸದಸ್ಯರು ಪ್ರಾರ್ಥಿಸಿದರು.ಡಾ. ಧನವಂತ ಹಾಜವಗೋಳ ಸ್ವಾಗತಿಸಿದರು. ಶಂಕರ ಹಲಗತ್ತಿ ಪ್ರಾಸ್ತಾವಿಕವಾಗಿ ಮಾತನಾಡಿದರು. ವೀರಣ್ಣಒಡ್ಡೀನ ನಿರ್ವಹಿಸಿದರು. ಡಾ. ಜಿನದತ್ತ ಹಡಗಲಿ ವಂದಿಸಿದರು. ಕಾರ್ಯಕ್ರಮದಲ್ಲಿ ಬಸವಪ್ರಭು ಹೊಸಕೇರಿ, ಡಾ.ಸುರೇಶಗುದಗನವರ, ಡಾ.ಬಾಳಣ್ಣಾ ಶೀಗೀಹಳ್ಳಿ, ರಾಮಚಂದ್ರ ಧೋಂಗಡೆ, ಎಂ.ಎಸ್.ನರೇಗಲ್‌ಸೇರಿದಂತೆಹೊಂಗಲ್ ಪರಿವಾರದವರು ಉಪಸ್ಥಿತರಿದ್ದರು.

# ಶ್ರೀ ಬಸವೇಶ್ವರ ಜಯಂತಿ ಕಾರ್ಯಕ್ರಮ



**ಹುಬ್ಬಳ್ಳಿ** : ವಿಶ್ವಗುರು ಶ್ರೀ ಜಗಜ್ಯೋತಿ ಬಸವೇಶ್ವರರ ಜಯಂತಿ ಅಂಗವಾಗಿ ಏ. 27 ರಿಂದ 30 ರವರೆಗೆ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು ವೀರಶೈವ ಸಂಘಟನಾ ಸಮಿತಿಯ ಹಾಗೂ ಶ್ರೀ ಜಗಜ್ಯೋತಿ ಬಸವೇಶ್ವರ ಜಯಂತಿ ಉತ್ಸವ ಸಮಿತಿಯ ಅಧ್ಯಕ್ಷರಾದ ಸರೋಜಾ ಹೂಗಾರ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಏ. 27 ರಂದು ಮು. 8.30 ಕ್ಕೆ ನಗರದ ಮೂರುಸಾವಿರಮಠದ ಶ್ರೀ ಜಗದ್ಗುರು ಡಾ. ಗುರುಸಿದ್ಧರಾಜಯೋಗೀಂದ್ರ ಮಹಾಸ್ವಾಮಿಗಳ ಸಾನಿಧ್ಯದಲ್ಲಿ ಷಟಸ್ಥಲ ಧ್ವಜಾರೋಹಣ ನಡೆಯಲಿದೆ. ಅಂದು ಸಂಜೆ 4 ಗಂಟೆಗೆ ಬೈಕ್ ರ್ಯಾಲಿ ಜರುಗಲಿದೆ.

ಏ. 28 ರಂದು ಸಂಜೆ 4 ಗಂಟೆಗೆ ಮಹಿಳೆಯರಿಂದ ಮತ್ತು ಮಕ್ಕಳಿಂದ ಶ್ರೀ ಬಸವಣ್ಣನವರ ವಚನಗಳ ಗಾಯಮ ಸ್ಪರ್ಧೆ ನಡೆಯಲಿದೆ. ಸಂಜೆ 6.30 ಕ್ಕೆ ಭರತ ನಾಟ್ಯ ಹಾಗೂ ಹಾಸ್ಯ ಕಾರ್ಯಕ್ರಮಗಳು ಇರಲಿವೆ ಎಂದರು.

ಏ. 29 ರಂದು ಸಂಜೆ 6.30 ಕ್ಕೆ ಶ್ರೀ ಬಸವಣ್ಣನವರ ವಚನ ಗಾಯನ ನಡೆಯಲಿದೆ. ಈ ಸಂದರ್ಭದಲ್ಲಿ ವಚನ ಗಾಯನದಲ್ಲಿ ಹಾಗೂ ಇತರ ಚಟುವಟಿಕೆಗಳಲ್ಲಿ ಪಾಲ್ಗೊಂಡವರಿಗೆ

ಮತ್ತು ಮಹಿಳೆಯರು ಹಾಗೂ ಮಕ್ಕಳಿಗೆ ನಡೆದ ವೇಷಭೂಷಣ ಸ್ಪರ್ಧೆಯಲ್ಲಿ ಪಾಲ್ಗೊಂಡವರಿಗೆ ಹಾಗೂ ರಂಗೋಲಿ ಸ್ಪರ್ಧೆಯಲ್ಲಿ ಭಾಗವಹಿಸಿದವರಿಗೆ ಸನ್ಮಾನ ಮಾಡಲಾಗುವುದು.

ಏ. 30 ರಂದು ಸಂಜೆ 4 ಗಂಟೆಗೆ ಭವ್ಯ ಮೆರವಣಿಗೆ ನಡೆಯಲಿದೆ ಎಂದು ಅವರು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಪ್ರವೀಣ ಕುಬಸದ, ಈರಪ್ಪ ಎಮ್ಮಿ, ಧಾರವಾಡಶೆಟ್ಟರ್ ಉಪಸ್ಥಿತರಿದ್ದರು.

# ಗಿಗ್ ಕಾರ್ಮಿಕರ ಕಲ್ಯಾಣಕ್ಕೆ ಪಣ

**ಧಾರವಾಡ:** ಗಿಗ್ ಆರ್ಥಿಕತೆಯಲ್ಲಿ ಪ್ರಮುಖ ಪಾತ್ರವಹಿಸುವ ಕಾರ್ಮಿಕರ ಆರೋಗ್ಯವನ್ನು ಗಮನದಲ್ಲಿ ಇಟ್ಟುಕೊಂಡು ಅಗ್ರಿಗೇಟರ್ ಸಂಸ್ಥೆಗಳಿಂದ ಸುಂಕ ಸಂಗ್ರಹವನ್ನು ಮಾಡಲಾಗುವುದು ಎಂದು ಕಾರ್ಮಿಕ ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಅವರು ಹೇಳಿದರು. ಧಾರವಾಡದಲ್ಲಿ ವಾರ್ತಾ ಇಲಾಖೆಯ ಗಾಂಧಿ ಭವನಉದ್ಘಾಟನಾಸಮಾರಂಭದ ವೇಳೆ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಶೇ 5 ರಷ್ಟು ಸುಂಕ ಸಂಗ್ರಹಿಸಲಾಗುವುದು ಎಂಬ ವರದಿಗಳಿಗೆ ಆಕ್ಷೇಪ ವ್ಯಕ್ತವಾಗಿರುವುದರ ಬಗ್ಗೆ ಪ್ರತಿಕ್ರಿಯಿಸಿದರು.

ಗಿಗ್ ಕಾರ್ಮಿಕರು ತಮ್ಮ ಆರೋಗ್ಯವನ್ನು ಲೆಕ್ಕಿಸದೆ ಕೆಲಸ ಮಾಡುತ್ತಾರೆ. ಅವರು ಸಾಮಾನ್ಯವಾಗಿ ಸೈಕಲ್ ಹಾಗೂ ಮೋಟಾರ್ ಬೈಕ್‌ಗಳಲ್ಲಿ ಡೆಲಿವರಿ ಕೆಲಸ ಮಾಡುತ್ತಾರೆ. ಹೀಗೆ ಅವರು ರಸ್ತೆಯಲ್ಲಿ ಸಾಗುವಾಗ ಅವರು ಸೇವಿಸುವ ಇಂಗಾಲದ



ಪ್ರಮಾಣವೂ ಅಧಿಕವಾಗಿರುತ್ತದೆ. ತಮ್ಮ ಆರೋಗ್ಯವನ್ನೂ ಲೆಕ್ಕಿಸದೇ ಕುಟುಂಬಕ್ಕಾಗಿ ಅವರು ದುಡಿಯುತ್ತಾರೆ. ಇದನ್ನು ಗಮನದಲ್ಲಿಟ್ಟುಕೊಂಡು ಸೆಸ್ ಸಂಗ್ರಹ ಮಾಡಲಾಗುವುದು ಎಂದು ವಿವರಿಸಿದರು.

ಒಬ್ಬ ಗಿಗ್ ಕಾರ್ಮಿಕ ಸರಾಸರಿ ಇಪ್ಪತ್ತು ವರ್ಷ ಕೆಲಸ ಅವನು ಸೇವಿಸುವ ಕಾರ್ಬನ್ ಡೈ ಆಕ್ಸೆಡ್ ಪ್ರಮಾಣವೂ ಸಾಕಷ್ಟು ಇರುತ್ತದೆ. ಅವರ ಯೋಗಕ್ಷೇಮ ಸಹ ಮುಖ್ಯ. ಇಲ್ಲಿ ಬಹುರಾಷ್ಟ್ರೀಯ ಕಂಪನಿಗಳಿಗೆ ಲಾಭ ಅಥವಾ ನಷ್ಟ ಮಾಡುವ ವಿಚಾರ ಮುಖ್ಯವಲ್ಲ. ಗಿಗ್ ಕಾರ್ಮಿಕರ ಕ್ಷೇಮಾಭಿವೃದ್ಧಿ ಇಲಾಖೆಗೆ ಮುಖ್ಯ. ಅವರ ಕುಟುಂಬ ಮುಖ್ಯ. ಈ ನಿಟ್ಟಿನಲ್ಲಿ ನಾವು ಸೆಸ್ ಬಗ್ಗೆ ನಿರ್ಧಾರ ಕೈಗೊಳ್ಳುತ್ತೇವೆ ಎಂದರು.

ಎಲ್ಲಾ ಅಗ್ರಿಗೇಟರ್ ಕಂಪನಿಗಳಿಗೆ ಸಾರಾಸಗಟಾಗಿ ಶೇ ಐದರಷ್ಟು ಸೆಸ್ ವಿಧಿಸುವುದಿಲ್ಲ. ಇದನ್ನು ಅವಸರದಲ್ಲಿ ಅಂತಿಮಗೊಳಿಸುವುದಿಲ್ಲ. ಗಿಗ್ ಮಂಡಳಿ ರಚನೆಗೆ ಸಂಪುಟ ಅನುಮೋದನೆ ನೀಡಿದೆ. ಮುಂದೆ ಮಂಡಳಿ ರಚನೆಯಾಗಲಿದೆ. ನಿಯಮ ರಚನೆ ಮಾಡುವಾಗ ಸಂಬಂಧಿಸಿದ ಎಲ್ಲರ ಅಭಿಪ್ರಾಯ ಪಡೆಯುತ್ತೇವೆ. ಆಸಕ್ತರನ್ನು ಸೇರಿಸಿ ಚರ್ಚೆ ಮಾಡುತ್ತೇವೆ. ಅವರ ಅಭಿಪ್ರಾಯಕ್ಕೆ ಮನ್ನಣೆ ನೀಡುತ್ತೇವೆ. ಶೇ 5 ರಷ್ಟು ಸೆಸ್ ಯಾರಿಗೆ ಸಂಗ್ರಹಿಸಬೇಕು. ಶೇ 5ರ ಒಳಗೆ ಯಾರಿಗೆ ಸಂಗ್ರಹ ಮಾಡಬೇಕು ಎಂದು ಮುಂದೆ ತೀರ್ಮಾನ ಮಾಡುತ್ತೇವೆ. ಅಂತಿಮಗಾಗಿ ಒಂದು ನಿರ್ಣಯ ಕೈಗೊಳ್ಳುತ್ತೇವೆ ಎಂದರು.

ಇಂತಹ ಮಹತ್ವಪ್ರಯತ್ನದ ಹಿಂದೆ ನಮ್ಮ ಪಕ್ಷದ ಮುಖಂಡರಾದ ರಾಹುಲ್ ಗಾಂಧಿ ಅವರ ಶ್ರಮ ಇವೆ. ಗಿಗ್ ಕಾರ್ಮಿಕರ ಬಗ್ಗೆ ಅವರಿಗೆ ಅಪಾರವಾಗಿ ಕಾಳಜಿ ಇದೆ. ಭಾರತ್ ಜೋಡೊ ಯಾತ್ರೆ ವೇಳೆ ರಾಹುಲ್ ಗಾಂಧಿ ಅವರು ಇದರ ಬಗ್ಗೆ ಆಸಕ್ತಿ ತೋರಿದ್ದರು. ರಾಜಸ್ಥಾನದಲ್ಲಿ ಇದರ ಬಗ್ಗೆ ಮಸೂದೆ ಬಂದಿದೆ. ಇಡೀ ದೇಶದಲ್ಲೇ ಒಂದು ಅತ್ಯುತ್ತಮ ಮಸೂದೆಯನ್ನು ನಮ್ಮ ರಾಜ್ಯ ಮಾಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸರ್ಕಾರ ಈ ಕ್ರಮ ಕೈಗೊಂಡಿದೆ ಎಂದರು.

ನಾನು ಈಗಾಗಲೇ ಸುಮಾರು ಇಪ್ಪತ್ತು ಸಭೆಗಳನ್ನು ಮಾಡಿದ್ದೇನೆ. ಒಂದು ವರ್ಷ ಕಾಲಾವಕಾಶ ತೆಗೆದುಕೊಂಡಿದ್ದೇವೆ. ಯಾವುದನ್ನೂ ಅವಸರದಲ್ಲಿ ಮಾಡಿಲ್ಲ. ನಮ್ಮ ಗಿಗ್ ಮಸೂದೆಯನ್ನು ಮಾದರಿಯಾಗಿಟ್ಟುಕೊಂಡು ಬೇರೆ ಬೇರೆ ರಾಜ್ಯಗಳಲ್ಲೂ ಬರಲಿದೆ. ಇದು ನಮ್ಮ ಹೆಮ್ಮೆ ಎಂದು ಹೇಳಿದರು.

# ಬಿ.ಸಿ.ಎ. ತರಗತಿ ಆರಂಭ



**ಹುಬ್ಬಳ್ಳಿ:** ಇಲ್ಲಿನ ಸತ್ತೂರಿನ ಶ್ರೀ ಬಸವೇಶ್ವರ ರೂರಲ್ ಎಜ್ಯುಕೇಶನ್ ಡೆವಲಪ್ಮೆಂಟ್ ಟ್ರಸ್ಟ್‌ನಲ್ಲಿ ನೂತನವಾಗಿ ಬಿಸಿಎ ತರಗತಿಯನ್ನು ಆರಂಭಿಸಲಾಗಿದ್ದು, 2025–26 ರ ನೇ ಸಾಲಿನ ಪ್ರವೇಶಾತಿ ಪ್ರಾರಂಭಿಸಲಾಗಿದೆ ಎಂದು ಟ್ರಸ್ಟ್‌ನ ಅಧ್ಯಕ್ಷ ಶರಣಪ್ಪ ಕೊಟಗಿ ಹೇಳಿದರು.

ನಗರದಲ್ಲಿಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈಗಾಗಲೇ ಶಿಕ್ಷಣ ಸಂಸ್ಥೆ ಕೇವಲ ಐದು ವಿದ್ಯಾರ್ಥಿಗಳಿಂದಪ್ರಾರಂಭವಾಗಿ ಇಂದು ಸಾವಿರಾರು ವಿದ್ಯಾರ್ಥಿಗಳಿಗೆಗುಣಮಟ್ಟದಶಿಕ್ಷಣವನ್ನುನೀಡುತ್ತಿದೆ. ಇದರ ಜೊತೆಗೆ ಅನೇಕ ಸಾಮಾಜಿಕ ಕಾರ್ಯಗಳಲ್ಲಿ ಸಂಸ್ಥೆ ಮುಂದಿದೆ ಎಂದರು.

ಅದರಂತೆ ಇದೀಗ ವಿದ್ಯಾರ್ಥಿಗಳಿಗೆ ಅನುಕೂಲವಾಗಲೆಂದು ಬಿಸಿಎ (ಬ್ಯಾಚುಲರ್ ಆಫ್ ಕಂಪ್ಯೂಟರ್ ಅಪ್ಲಿಕೇಶನ್) ಆರಂಭಿಸಿದ್ದೇವೆ. ಈ ಕ್ಷೇತ್ರದಲ್ಲಿ ವಿದ್ಯಾರ್ಥಿಗಳಿಗೆ ಬಹಳಷ್ಟು ಉದ್ಯೋಗಾವಕಾಶಗಳಿದ್ದು, ಈ ನಿಟ್ಟಿನಲ್ಲಿ ಪೊ?ಷಕರ ಒತ್ತಾಸೆಯಂತೆ ಆರಂಭ ಮಾಡಲಾಗಿದೆ. ಆಸಕ್ತರು ಕೂಡಲೇ ಸಂಸ್ಥೆಯಲ್ಲಿ ಪ್ರವೇಶಾತಿ ಪಡೆದು ವಿದ್ಯಾರ್ಥಿಗಳು ತಮ್ಮ ಭವಿಷ್ಯವನ್ನು ಉಜ್ವಲಗೊಳಿಸಬೇಕು ಎಂದು ತಿಳಿಸಿದರು.

ನಾಗರಾಜ್ ಕೊಟಗಿ ಮಾತನಾಡಿ, ಸಂಸ್ಥೆಯಲ್ಲಿ ಬಿಸಿಎ ಶಿಕ್ಷಣಕ್ಕೆ ಬೇಕಾದ ಎಲ್ಲ ವ್ಯವಸ್ಥೆಯನ್ನು ಮಾಡಲಾಗಿದೆ, ಅನುಭವಿ ಶಿಕ್ಷಣ ವೃಂದ ವಿದ್ಯಾರ್ಥಿಗಳಿಗೆ ತರಭೇತಿ ನೀಡಲಿದ್ದಾರೆ ಎಂದರು.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 8951333427, 945877769, 7019387655 ಗೆ ಸಂಪರ್ಕಿಸಿ.

ಪತ್ರಿಕಾಗೋಷ್ಠಿಯಲ್ಲಿ ಮಹಾಂತೇಶ ಹಿರೇಮಠ, ಉಮೇಶ ಜಾವೂರ್, ಪ್ರವೀಣ ಪೂಜಾರ ಸೇರಿದಂತೆ ಇನ್ನಿತರರು ಇದ್ದರು.

# ಅಂತಾರಾಷ್ಟ್ರೀಯ ಆಂಗ್ಲ ಭಾಷಾ ದಿನ

## ಶೇಕ್ಸಪೀಯರನ ನಾಟಕಗಳು ಇಂದಿಗೂ ಪ್ರಸ್ತುತ: ಬೀಳಗಿ



**ಮಹಾಲಿಂಗಪುರ :** ಆಂಗ್ಲ ಭಾಷೆಯ ಖ್ಯಾತ ನಾಟಕಕಾರ ವಿಲಿಯಮ್ ಶೇಕ್ಸಪೀಯರನ ನಾಟಕಗಳು ಇಂದಿಗೂ ಪ್ರಸ್ತುತವೆನಿಸುತ್ತವೆ ಎಂದು ಬಾಗಲಕೋಟೆ ಜಿ.ಎಫ್.ಜಿ.ಸಿ. ಮಹಾವಿದ್ಯಾಲಯದ ಆಂಗ್ಲ ವಿಷಯದ ಸಹಾಯಕ ಪ್ರಾಧ್ಯಾಪಕರಾದ ಡಾ. ಬಸವರಾಜ ಬೀಳಗಿ ಹೇಳಿದರು.

ಪಟ್ಟಣದ ಕೆಎಲ್‌ಇ ಸಂಸ್ಥೆಯ ಎಸ್ಸಿಪಿ ಪದವಿ ಮಹಾವಿದ್ಯಾಲಯದಲ್ಲಿ ಆಂಗ್ಲ ವಿಭಾಗದ ವತಿಯಿಂದ ಹಮ್ಮಿಕೊಂಡಿದ್ದ ವಿಲಿಯಮ್ ಶೇಕ್ಸಪೀಯರನ ಜನ್ಮ ದಿನದ ನಿಮಿತ್ಯ ಅಂತರಾಷ್ಟ್ರೀಯ ಆಂಗ್ಲ ಭಾಷಾ ದಿನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ವಿಲಿಯಮ್ ಶೇಕ್ಸಪೀಯರ ಆಂಗ್ಲ ಭಾಷೆ ಮತ್ತು ಸಾಹಿತ್ಯಕ್ಕೆ ತನ್ನದೇಯಾದ ಅಮೂಲ್ಯ ಕೊಡುಗೆ ನೀಡಿದ್ದಾರೆ ಎಂದರು.

ಐ.ಕ್ಯೂ.ಎ. ಸಿ. ಸಂಯೋಜಕಿ ಡಾ. ಸುನಂದಾ ಸೋರಗಾಂವಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ವಿಲಿಯಮ್ ಶೇಕ್ಸಪೀಯರನ ನಾಟಕಗಳು ಇಂದಿನ ಯುವ ಪೀಳಿಗೆ ಮತ್ತು ಬರಹಗಾರರಿಗೆ ಸ್ಫೂರ್ತಿಯಾಗಿವೆ ಎಂದರು.

ಇಂಗ್ಲೀಷ್ ವಿಭಾಗದ ಮುಖ್ಯಸ್ಥ ವಿರುಪಾಕ್ಷ ಅಡಹಳ್ಳಿ, ಕಾರ್ಯಕ್ರಮದ ಸಂಯೋಜಕ ಸಿ. ಎಂ. ಐಗಳಿ, ಉಪನ್ಯಾಸಕರಾದ ಪಿ. ಟಿ. ಅಥಣಿ, ಕುಮಾರಿ ಡಿ. ಎ. ಅಮ್ಮಣಗಿ, ಡಾ. ಎಸ್. ಸಿ. ಬಿಜ್ಜರಗಿ, ಎಸ್. ಎಸ್. ಮುಗಳ್ಯಾಳ, ಬಿ. ಎ. ಪಾಗದ, ಶಂಕರ ಪಾಟೀಲ್ ಸೇರಿದಂತೆ ವಿವಿಧ ವಿಭಾಗದ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಜಗತ್ತಿನ ಸಾಹಿತ್ಯಿಕ, ಸಾಂಸ್ಕೃತಿಕ ರಾಯಭಾರಿ ಶೇಕ್ಸಪಿಯರ್

**ರಬಕವಿ–ಬನಹಟ್ಟಿ :** ಶೇಕ್ಸಪಿಯರ್ ಜಗತ್ತಿನ ಸಾಹಿತ್ಯದ ಮಹಾನ್ ನಾಯಕ. ಅವನೊಬ್ಬ ನಾಟಕಕಾರ, ಕವಿ, ನಟ ಮಾತ್ರವಾಗಿರದೆ ಅವನು ಬಹಳಷ್ಟು ಕವಿಗಳ, ನಾಟಕಕಾರರ ಮತ್ತು ನಟರ ಜೀವನದ ಚೈತನ್ಯವಾಗಿದ್ದರು ಎಂದು ರಬಕವಿ–ಬನಹಟ್ಟಿಯ ಶ್ರೀಮತಿ ಗುರುಸಂಗವ್ವ ಬಸಪ್ಪ ಕೊಳಕಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯೆ ಚಂದ್ರಪ್ರಭಾ ಬಾಗಲಕೋಟ ತಿಳಿಸಿದರು.

ಅವರು ಬುಧವಾರ ಇಲ್ಲಿನ ತಮ್ಮಣ್ಣಪ್ಪ ಚಿಕ್ಕೋಡಿ ಕಾಲೇಜಿನಲ್ಲಿ ಇಂಗ್ಲಿಷ ಭಾಷಾ ದಿನಾಚರಣೆಯ ಅಂಗವಾಗಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿಶೇಕ್ಸಪಿಯರ್‌ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದರು.

ಅವರು ಜಗತ್ತಿನ ದಾರ್ಶನಿಕನಾಗಿ, ಭಾಷಾ ಬೆಳವಣಿಗೆಯ ಜೊತೆಗೆ ಜಗತ್ತಿನ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ



ರಾಯಭಾರಿಯಾಗಿದ್ದರು. ಜಗತ್ತಿನ ಪ್ರತಿಯೊಬ್ಬರು ಶೇಕ್ಸಪಿಯರ್ ಬರೆದ ಕೃತಿಗಳನ್ನು ಓದಬೇಕು ಎಂದು ಚಂದ್ರಪ್ರಭಾ ಬಾಗಲಕೋಟ ತಿಳಿಸಿದರು.

ಪ್ರಾಚಾರ್ಯ ಡಾ. ಜಿ. ಆರ್. ಜುನ್ನಾಯ್ಕರ್ ಮಾತನಾಡಿ, ಇಂಗ್ಲಿಷ್ ಭಾಷಾ ದಿನಾಚರಣೆಯುಜಗತ್ತಿನಆಚರಣೆಯಾಗಿದೆ. ಈ ದಿನದಂದು ಇಂಗ್ಲಿಷ್ ಭಾಷೆಯ ಮಹತ್ವ, ಸಾಹಿತ್ಯ, ಇತಿಹಾಸ ಮತ್ತು ಸಂಸ್ಕೃತಿಯ ಬಗ್ಗೆ ಪ್ರತಿಯೊಬ್ಬರಿಗೂ ತಿಳಿಸಬೇಕು. ನಮ್ಮ ಭಾಷೆಗಳನ್ನು ಕಲಿಯುವುದರ ಜೊತೆಗೆ ಇನ್ನಿತರ ಭಾಷೆಗಳನ್ನು ಕೂಡ ನಾವು ಕಲಿಯಬೇಕು ಪ್ರೀತಿಸಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ವಿಭಾಗದ ಮುಖ್ಯಸ್ಥೆ ಗೀತಾ ಗೋಂದಕರ,

ಐ.ಕ್ಯೂ.ಎ.ಸಿ. ವಿಭಾಗದ ಡಾ. ಪ್ರಕಾಶ ಕೆಂಗನಾಳ, ಡಾ. ಮಂಜುನಾಥ ಬೆನ್ನೂರ, ಬಸವರಾಜ ಬೀಳಗಿ ಉಪಸ್ಥಿತರಿದ್ದರು.

ಪ್ರತಿಭಾ ಹಂದಿಗುಂದ,

ಸ್ವಾತಿ ಖೇಬೋಜಿ ಪ್ರಾರ್ಥಿಸಿದರು. ಉಪನ್ಯಾಸಕ ಮಾಧ್ವಾನಂದ ಗುಟ್ಲಿ ಸ್ವಾಗತಿಸಿ, ಪ್ರಾಸ್ತಾವಿಕ ನುಡಿಗಳನ್ನಾಡಿದರು. ಎಂ.ಡಿ. ಸಂಕಾರ ವಂದಿಸಿದರು.

ಕವಿತಾ ಮಲಕಪ್ಪನವರ ಸೊಗಸಾಗಿ ನಿರೂಪಿಸಿದರು.

# ವಿದ್ಯಾರ್ಥಿಗಳು ತಮ್ಮೊಳಗಿನ "ಉದ್ಯಮಿ"ಯನ್ನು ಹೊರತರಬೇಕು: ಪ್ರೊ.ಬಿ.ಎಸ್.ನಾವಿ

**ಬಾಗಲಕೋಟೆ :** ಉದ್ಯಮಶೀಲತಾ ಕೌಶಲ್ಯಗಳು ಎಲ್ಲರಲ್ಲೂ ಇರುತ್ತವೆ.ಆದರೆ ಅನೇಕರಿಗೆ ತಮ್ಮಲ್ಲಿ ತಮ್ಮಲ್ಲಿರುವ ಸಾಮರ್ಥ್ಯ ತಿಳಿದಿರುವುದಿಲ್ಲ. ನೀವು ಆ ಕೌಶಲ್ಯಗಳನ್ನು ಗುರುತಿಸಬೇಕು ಮತ್ತು ತಮ್ಮೊಳಗಿನ "ಉದ್ಯಮಿ"ಯನ್ನು ಹೊರತರಬೇಕು ಎಂದು ಬೆಳಗಾವಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಪಂಡಿತ್ ದೀನದಯಾಳ್ ಉಪಾಧ್ಯಾಯ ಅಧ್ಯಯನ ಪೀಠದ ನಿರ್ದೇಶಕರಾದ ಪ್ರೊ.ಬಿ.ಎಸ್.ನಾವಿ ಅವರು ಹೇಳಿದರು.

ಅವರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿಯ ಪಂಡಿತ್ ದೀನದಯಾಳ್ ಉಪಾಧ್ಯಾಯ ಅಧ್ಯಯನ ಪೀಠ, ಲಘು ಉದ್ಯೋಗ ಭಾರತಿ, ಕರ್ನಾಟಕ & ಬಿ.ವಿ.ವಿ. ಸಂಘದ ಬಾಗಲಕೋಟಯ ಬಸವೇಶ್ವರ ವಾಣಿಜ್ಯ ಕಾಲೇಜಿನ Institution's Innovation Council (IIC) & Incubation Centre ಸಹಯೋಗದಲ್ಲಿ "ಉದ್ಯಮಶೀಲತಾ ಸಾಮರ್ಥ್ಯದ ಅರಿವು ಮೂಡಿಸುವಿಕೆ"



ಕುರಿತು ನಡೆದ ಒಂದು ದಿನದ ಕಾರ್ಯಾಗಾರವನ್ನುದ್ದೇಶಿಸಿ ಮಾತನಾಡಿದಅವರು,ಉದ್ಯಮಶೀಲತೆಯ ಕೇಂದ್ರೀಕರಣದ ಅತ್ಯಂತ ವಿಸ್ತಾರವಾದ ಉದ್ಯಮಶೀಲತೆಗೆ ನಿಮ್ಮ ನಿರ್ದಿಷ್ಟ ಆಸಕ್ತಿಗಳನ್ನು ಬೆಳೆಸಿಕೊಳ್ಳಬೇಕು.ನಿಮ್ಮದೇ ಆದ ಉದ್ಯೋಗ ಸಾಮರ್ಥ್ಯ ವಿನ್ಯಾಸಕ್ಕೆ ಉತ್ಸಾಹ, ಶಿಸ್ತು, ಸಮಯಪ್ರಪ್ರಜ್ಞೆ ಅತಿ ಅವಶ್ಯಕ ಎಂದು ಎಂದರು.

ಕರ್ನಾಟಕದ ಲಘು ಉದ್ಯೋಗ ಭಾರತೀಯ ರಾಜ್ಯ ಕಾರ್ಯದರ್ಶಿಗಳಾದ ಡಾ.ಪ್ರಿಯಾ ಪುರಾಣಿಕ ಅವರು ಮುಖ್ಯ ಅತಿಥಿಗಳಾಗಿ ಮಾತನಾಡಿ ಆವಿಷ್ಕಾರ ಮತ್ತು ಅಭ್ಯಾಸದ ಮೂಲಕ ನೀವು ಉದ್ಯಮಶೀಲವಾಗಿಯೋಚಿಸುವ ಮತ್ತು ಕಾರ್ಯನಿರ್ವಹಿಸುವ ಸಾಮರ್ಥ್ಯವನ್ನು ಅಭಿವೃದ್ಧಿ ಪಡಿಸಿಕೊಳ್ಳಬೇಕು. ಉದ್ಯಮಿಗಳು ವಿವಿಧ ಸಂದರ್ಭಗಳಲ್ಲಿ (ಸ್ಟಾರ್ಟ್ ಅಪ್‌ಗಳು, ಬೆಳವಣಿಗೆಯ ಹಂತದ ಉದ್ಯಮಗಳು, ಕುಟುಂಬ ಉದ್ಯಮಗಳು,ಸ್ಥಾಪಿತಸಂಸ್ಥೆಗಳು, ಸಾಮಾಜಿಕಅಥವಾಸಮುದಾಯ ಉದ್ಯಮಗಳು, ಇತ್ಯಾದಿ) ಹೊಸ ವ್ಯಾಪಾರ ಅವಕಾಶಗಳನ್ನು ಹೇಗೆ ಪರಿಚಯಿಸುತ್ತಾರೆ ಎಂಬುದನ್ನು ತಿಳಿದುಕೊಳ್ಳಬೇಕು . ಹಲವಾರು ಯಶಸ್ವಿಉದ್ಯಮಿಗಳುಮತ್ತುಅವರ ವಿಧಾನಗಳ ಕಠಿಣ ವಿಶ್ಲೇಷಣೆಯ ಮೂಲಕ, ಸ್ಥಿರವಾದ ವಿಷಯಗಳ ಒಂದು ಸೆಟ್ ಹೊರಹೊಮ್ಮಿದೆ. ಈ ವಿಷಯಗಳು ಸಹಜ ಪ್ರತಿಭೆಗಳಲ್ಲ, ಬದಲಾಗಿ ಕಾಲಾನಂತರದಲ್ಲಿ ಕಲಿಯಬಹುದಾದ, ಅಭ್ಯಾಸ ಮಾಡಬಹುದಾದ ಮತ್ತು ಪರಿಷ್ಕರಿಸಬಹುದಾದ ಕೌಶಲ್ಯಗಳಾಗಿವೆ ಎಂದರು.

ಕಾರ್ಯಗಾರದ ಅಧ್ಯಕ್ಷತೆಯನ್ನು ವಹಿಸಿದ ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ಜಗನ್ನಾಥ ವಿ.ಚವ್ಹಾಣ ಅವರು ಮಾತನಾಡಿದರು. ವೇದಿಕೆ ಮೇಲೆ ಸಂಪನ್ಮೂಲ ವ್ಯಕ್ತಿಗಳಾದ ಬಾಗಲಕೋಟೆಯ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಜಂಟಿ ನಿರ್ದೇಶಕರಾದ ಪ್ರಶಾಂತ್ ಬಾರಿಗಿಡದ ಅವರು ಸರ್ಕಾರದ ಉದ್ಯೋಗದ ಯೋಜನೆ ಮತ್ತು ಸವಲತ್ತುಗಳನ್ನು ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು. ಡಾ.ಶಿವಲಿಂಗಯ್ಯ. ಎಸ್. ಗೋಥೆ ಸಹಾಯಕ ಪ್ರಾಧ್ಯಾಪಕರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ, ಐ.ಕ್ಯೂ.ಎ.ಸಿ ಸಂಯೋಜಕರಾದ ಶ್ರೀಮತಿಗಿರಿಜಾನಾವದಗಿ,ಐ.ಸಿ.ಸಿ ಸಂಯೋಜಕರಾದ ರಾಮಕೃಷ್ಣ ತ್ಯಾಪಿ ಅವರು ಉಪಸ್ಥಿತರಿದ್ದರು ಸ್ವಾಗತಿಸಿದರು. ಶ್ರೀಮತಿ ಬಾರ್ಸಿ ಶೀತಲ್ ಕಾರ್ಯಕ್ರಮ ನಿರೂಪಿಸಿದರು. ಶ್ರೀಮತಿ ಕೆ.ಜೆ. ಮಲಜಿ ವಂದಿಸಿದರು.

# ಪಾಂಡಪ್ಪ ಲಂಗೋಟಿ ನಿಧನ



**ಮೂಡಲಗಿ :** ಖಾನಟ್ಟಿಯ ಲಂಗೋಟಿ ತೋಟದ ಹಿರಿಯರಾದ ಪಾಂಡಪ್ಪಡಂಗಪ್ಪಾ ಲಂಗೋಟಿ ತಮ್ಮ 78 ನೆಯ ವಯಸ್ಸಿನಲ್ಲಿ ಏಪ್ರಿಲ್ 23 ರಂದು ನಿಧನರಾದರು.

ಮೃತರು ತಮ್ಮ ಹಿಂದೆ ಪತ್ನಿ, ನಾಲ್ಕು ಜನ ಗಂಡು ಮಕ್ಕಳು, ಮೂರು ಜನ ಹೆಣ್ಣು ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

# ಕುಂಚನೂರ ಹಾಗೂ ಕೊಟ್ಟರಶೆಟ್ಟಿಗೆ ಜಿಲ್ಲಾ ಬಸವಶ್ರೀ ಪ್ರಶಸ್ತಿ





**ರಬಕವಿ–ಬನಹಟ್ಟಿ :** ಬಸವ ಜಯಂತಿಯ ಅಂಗವಾಗಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಬಾಗಲಕೋಟೆಯಲ್ಲಿ ಏಪ್ರೀಲ್ 30 ರಂದು ಸಂಜೆ 4 ಗಂಟೆಗೆ ಹಮ್ಮಿಕೊಂಡಿರುವ ಸಮಾರಂಭದಲ್ಲಿ ರಬಕವಿಯ ಹಿರಿಯರು, ದಾನಿಗಳೂ ಆದ ಮಲ್ಲೇಶಪ್ಪ ಶಿ. ಕುಂಚನೂರ ಹಾಗೂ ಸೋಮಶೇಖರ ದುಂಡಪ್ಪ ಕೊಟ್ರಶೆಟ್ಟಿ ಅವರಿಗೆ 'ಬಸವಶ್ರೀ' ಪ್ರಶಸ್ತಿ ಪ್ರದಾನ ಮಾಡಲಾಗುವುದೆಂದು ಜಿಲ್ಲಾ ಕಸಾಪ ಅಧ್ಯಕ್ಷ ಶಿವಾನಂದ ಶೆಲ್ಲಿಕೇರಿ ತಿಳಿಸಿದ್ದಾರೆ.

# ವರನಟ ಡಾ.ರಾಜ್ ಜೀವನ ಶೈಲಿ ಆದರ್ಶಪ್ರಾಯ: ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣಪ್ಪ

**ಹೊಸಪೇಟೆ :** ನಾಡಿನ ನೆಲ, ಜಲ, ಕನ್ನಡ ಭಾಷೆ ಪರ ಮುಂಚೂಣಿ ವಹಿಸಿದ್ದ ಕನ್ನಡದ ಕಟ್ಟಾಳು ಡಾ.ರಾಜಕುಮಾರ ಜೀವನ ಶೈಲಿಯೇ ಆದರ್ಶ ಪ್ರಾಯವಾದದು ಎಂದು ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣಪ್ಪ ಹೇಳಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾಡಳಿತ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಯೋಗದಲ್ಲಿ ಏರ್ಪಡಿಸಿದ್ದ ವರನಟಡಾ.ರಾಜಕುಮಾರ್‌ರವರ 97ನೇ ಜನ್ಮದಿನಾಚರಣೆ ಕಾರ್ಯ ಕ್ರಮದಲ್ಲಿ ಡಾ.ರಾಜ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಗುರುವಾರ ಅವರು ಮಾತನಾಡಿದರು, ವಿನಯವಂತಿಕೆಗೆ ರಾಜಕುಮಾರ್ ಮಾದರಿ ವ್ಯಕ್ತಿ, ವ್ಯಕ್ತಿತ್ವವಾಗಿದ್ದರು. ರಾಜ್ಯದ ಪ್ರಭಾವಿ ನಟನಾದರು ಚಿತ್ರರಂಗದ ಕಲಾವಿದರೊಂದಿಗೆ ಸಮಾನವಾಗಿ ಬೆರೆಯುತ್ತಿದ್ದದು ಸ್ಮರಣೀಯ. ಕರ್ನಾಟಕ ಕಲಾವಿದರ ಸಂಘ ಸ್ಥಾಪಿಸಿ ಕಲಾವಿದರ ಶ್ರೇಯೋಭಿವೃದ್ಧಿ ಬಯಸಿದ್ದರು. ಅಭಿಮಾನಿಗಳನ್ನು ದೇವರು ಎಂದು ಸರಳತೆ ಮೆರೆದ ಚಿತ್ರರಂದ ಧೃವತಾರೆಯಾಗಿದ್ದರು. ಅವರ ಎಲ್ಲಾ ಸಿನಿಮಾಗಳು ಸಾಮಾಜಿಕ ಪರಿವರ್ತನೆಗೆ ಪೂರಕವಾದ ಚಿತ್ರಗಳಾಗಿವೆ. ಅವರ ಜೀವನ ಶೈಲಿ, ಸರಳತೆ, ವಿನಯವಂತಿಕೆ ಇಂದಿನ ಯುವಕರು ಅಳವಡಿಸಿಕೊಳ್ಳ ಬೇಕಿದೆ. ರಾಜ್ಯಕ್ಕೆ, ರಾಷ್ಟ್ರಕ್ಕೆ ಉನ್ನತ ಕೀರ್ತಿ ನೀಡಿದ ಶ್ರೇಯಸ್ಸು ಡಾ.ರಾಜಕುಮಾರ್ ಸಲ್ಲಬೇಕಿದೆ. ಅಂತರಾಷ್ಟ್ರೀಯ ಮಟ್ಟದಲ್ಲಿ ಡಾ.ರಾಜಕುಮಾರ್ ಒಬ್ಬ ಶ್ರೇಷ್ಟ ನಟ ಗುರುತಿಸಿಕೊಂಡಿರುವುದು ಅಪ್ರತಿಮ ಸಾಧನೆಯಾಗಿದೆ. ದೇಶದ ಅನೇಕ ಮಹನೀಯರ ಹೆಸರಿನಲ್ಲಿ ಪಾತ್ರಗಳಿಗೆ ಜೀವ ತುಂಬಿ ಅವರ ವ್ಯಕ್ತಿತ್ವವನ್ನು ಅಜರಾಮರಗೊಳಿಸಿದ ಅಮರ ನಟ ಡಾ.ರಾಜಕುಮಾರ್ ಆಗಿದ್ದಾರೆ.

# ಕನ್ನಡ ಸಾಹಿತ್ಯ ಸಮ್ಮೇಳನ ಲಾಂಛನ ಬಿಡುಗಡೆ

**ಗುಳೇದಗುಡ್ಡ :** ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನ ಅಂಗವಾಗಿ ಸಮ್ಮೇಳನದ ಲಾಂಛನ ಹಾಗೂ ಪ್ರಚಾರ ಸಾಮಗ್ರಿಗಳನ್ನು ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸೋಮವಾರ ತಾಲ್ಲೂಕು ಕಸಾಪ ಪದಾಧಿಕಾರಿಗಳು ಬಿಡುಗಡೆಗೊಳಿಸಿದರು.

ಕಸಾಪ ಜಿಲ್ಲಾ ಗೌರವ ಕೋಶಾಧ್ಯಕ್ಷ ಸಿ.ಎಂ.ಜೋಶಿ ಮಾತನಾಡಿ, ಪಟ್ಟಣದಲ್ಲಿ 5ನೇ ಸಮ್ಮೇಳನ ನಡೆಯುತ್ತಿರುವುದು ಖುಷಿಯ ವಿಚಾರವಾಗಿದ್ದು, ಈ ಸಮ್ಮೇಳನವನ್ನು ಬಹಳಷ್ಟು ಅರ್ಥಪೂರ್ಣವಾಗಿ, ವಿಜೃಂಭಣೆಯಿಂದ ಆಚರಿಸುವ ಹೊಣೆಎಲ್ಲಸಾಹಿತ್ಯಾಸಕ್ತರಾಗಿದ್ದು, ಪ್ರತಿಯೊಬ್ಬರು ಈ ಸಮ್ಮೇಳನಕ್ಕೆ ಬೆಂಬಲಿಸಿ, ಸಮ್ಮೇಳನ ಯಶಸ್ವಿಗೆ ಸಹಕರಿಸಬೇಕೆಂದು ಮನವಿ ಮಾಡಿದರು.

ಕರವೇ ತಾಲ್ಲೂಕು ಅಧ್ಯಕ್ಷ ರವಿ



ಅಂಗಡಿ ಮಾತನಾಡಿ, ಕನ್ನಡ ಸಮ್ಮೇಳನದಲ್ಲಿಈಬಾರಿಬರಗುಂಡಿ ಅವರನ್ನು ಸರ್ವಾಧ್ಯಕ್ಷರನ್ನಾಗಿ ಆಯ್ಕೆ ಮಾಡಿದ್ದು, ಖುಷಿಯ ವಿಚಾರವಾಗಿದ್ದು, ಉತ್ತಮ ವಾಗ್ಮೀಗಳು,ಬರಹಗಾರಾಗಿದ್ದಾರೆ. ಸಮ್ಮೇಳನದ ಯಶಸ್ವಿಗೆ ಕರವೇ ಸಹಕರಿಸುತ್ತದೆ. ಅಷ್ಟೇ ಅಲ್ಲದೇ ಪಟ್ಟಣದ ಸಾರ್ವಜನಿಕರು ಸಹಕರಿಸಬೇಕು.ಈಸಮ್ಮೇಳನದಲ್ಲಿ ತಾಲ್ಲೂಕಿನ ಎಲ್ಲ ಸರಕಾರಿ ನೌಕರರು, ಶಾಲಾ ಮಕ್ಕಳು, ಶಿಕ್ಷಕರು ಭಾಗವಹಿಸಬೇಕೆಂದು ಮನವಿ ಮಾಡಿದರು.

ಕಸಾಪ ಅಧ್ಯಕ್ಷ ಎಚ್.ಎಸ್. ಘಂಟಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಈ ಸಂದರ್ಭದಲ್ಲಿ ಸಂಗಮೇಶ ಚಿಕ್ಕಾಡಿ, ಯಲ್ಲಪ್ಪ ಮನ್ನಿಕಟ್ಟಿ, ವಿಠ್ಠಳ ಬದಿ, ಈರಣ್ಣ ಅಲದಿ, ಬಾಲು ಹೊಸಮನಿ, ನೌಕರ ಸಂಘದ ನಿರ್ದೇಶಕರಾದ ರಾಜಗೋಪಾಲ ಉಂಡಿಗೇರಿ, ಮಲ್ಲಿಕಾರ್ಜುನ ಮಣ್ಣೂರ, ಜುಮ್ಮಣ್ಣ ಜುಮ್ಮಣ್ಣವರ, ಗುಂಡಪ್ಪ ಕೋಟಿ ಮುಂತಾದವರಿದ್ದರು.

ಗುಳೇದಗುಡ್ಡ ತಾಲ್ಲೂಕು ಸಾಹಿತ್ಯ ಸಮ್ಮೇಳನ ಅಂಗವಾಗಿ ಸಮ್ಮೇಳನದ ಲಾಂಛಣ ಪ್ರಚಾರ ಸಾಮಗ್ರಿಗಳನ್ನು ಪಟ್ಟಣದ ಪ್ರವಾಸಿ ಮಂದಿರದಲ್ಲಿ ತಾಲ್ಲೂಕು ಕಸಾಪ ಪದಾಧಿಕಾರಿಗಳು ಬಿಡುಗಡೆಗೊಳಿಸಿದರು.

# ಮಲೇರಿಯಾ ರೋಗ ತಡೆಗೆ ಸ್ವಯಂ ರಕ್ಷಣಾ ಕ್ರಮಗಳನ್ನು ಪಾಲಿಸಿ: ಎಸ್.ಎಸ್. ಅಂಗಡಿ

**ಬಾಗಲಕೋಟೆ :** ಜಿಲ್ಲಾ ಆರೋಗ್ಯ ಇಲಾಖೆಯಿಂದ, ತಾಲೂಕಿನ ಬೆನಕಟ್ಟಿಯ ವ್ಯಾಪ್ತಿಯಬೆನಕಟ್ಟಿ,ಗುಂಡನಪಲ್ಲೆಗ್ರಾಮದಲ್ಲಿ "ವಿಶ್ವ ಮಲೇರಿಯಾ ದಿನ ಜನ ಜಾಗೃತಿ" ಆಯೋಜಿಸಲಾಗಿತ್ತು. ಪ್ರಾಸ್ತಾವಿಕವಾಗಿ ಆರೋಗ್ಯ ನಿರೀಕ್ಷಣಾಧಿಕಾರಿ ಎಸ್ ಎಸ್ ಅಂಗಡಿಯವರು ನಿಮ್ಮ ಆರೋಗ್ಯ ನಮ್ಮಬದ್ಧತೆ, ಸ್ವಯಂರಕ್ಷಣಾ ಕ್ರಮಗಳನ್ನು ಪಾಲಿಸುವುದರಿಂದ ಸಾಂಕ್ರಾಮಿಕ ರೋಗಗಳನ್ನು ತಡೆಯಬಹುದು ಮಲೇರಿಯಾ ರೋಗವು ಅನಾಫಿಲಿಸ್ ಸೊಳ್ಳೆ ಕಚಚುವದರಿಂದ ಒಬ್ಬರಿಂದ ಒಬ್ಬರಿಗೆ ಹರಡುತ್ತದೆ. ಚಳಿ ಜ್ವರ ನಡುಕ, ತಲೆನೋವು ವಾಂತಿ ಮಲೇರಿಯಾ ಲಕ್ಷಣವಾಗಿದೆ. ನಿಂತ ನೀರಿನಲ್ಲಿ ಸೊಳ್ಳೆಗಳು ಉತ್ಪತ್ತಿಯಾಗುತ್ತವೆ. ನೀರಿನ ಸಂಗ್ರಹಗಳ ಪರಿಕರಗಳ ಮೇಲೆಮುಚ್ಚಳಿಕೆ ಹಾಕಬೇಕು ಸುತ್ತಮುತ್ತ ಪರಿಸರ ಸ್ವಚ್ಛತೆಯಿಂದ ರೋಗಗಳ ತಡೆಯಬಹುದು. ಘನತಾಜ್ಯ ಕಸ ವಿಲೇವಾರಿಮಾಡಬೇಕು ಸ್ವಯಂರಕ್ಷಣಾ ಕ್ರಮಗಳನ್ನುಪಾಲಿಸಬೇಕುಸೊಳ್ಳೆನಿರೋಧಕ ಸೊಳ್ಳೆ ಪರದೆ ಉಪಯೋಗಿಸಬೇಕು ಆರೋಗ್ಯ ಇಲಾಖೆಯ ಆರೋಗ್ಯ ನಿರೀಕ್ಷಣಾಧಿಕಾರಿಗಳು ತಮ್ಮ ಮನೆಗೆ ಬಂದಾಗ ನಿಖರ ಮಾಹಿತಿ ನೀಡಿ ಸಹಕರಿಸಬೇಕು ಯಾವುದೇ ತರಹ ಜ್ವರ ಕಾಣಿಸಿದರೆ ರಕ್ತಲೇಪನ ಪರೀಕ್ಷೆ ಮಾಡಿಸಬೇಕು ಭಯಬೇಡ ಮಲೇರಿಯಾ ಪರೀಕ್ಷೆ ಚಿಕಿತ್ಸೆ ಎಲ್ಲಾ ಸರಕಾರಿ ಆಸ್ಪತ್ರೆಯಲ್ಲಿ ಉಚಿತವಾಗಿರುತ್ತದೆ ಮಲೇರಿಯಾ ನಿಯಂತ್ರಣನಮ್ಮಕ್ಕೆಯಲ್ಲಿದೆಹೆಚ್ಚಿನಆರೋಗ್ಯ ಸಮಸ್ಯೆಗಳಿಗೆ 104 ಉಚಿತ ಕರೆ ಮೂಲಕ ಆರೋಗ್ಯ ಸಲಹೆಪಡೆದುಕೊಳ್ಳಬಹುದು ಎಂದರು.ಗ್ರಾಮದಲ್ಲಿಜ್ವರ ಪ್ರಕರಗಳ ಸಮೀಕ್ಷೆ ಮಾಡಿ ಸಂಶಯು ಭಲೇರಿಯಾ ರಕ್ತ ಲೇಪನ ಸಂಗ್ರಹಿಸಿ ಪ್ರಯೋಗಾಲಕ್ಕೆ ಕಳಿಸಲಾಯಿತು. "ವಿಶ್ವ ಮಲೇರಿಯಾ ದಿನ"ಜನ ಜಾಗೃತಿ ಕಾರ್ಯಕ್ರಮದಲ್ಲಿ ಆರೋಗ್ಯ ಇಲಾಖೆಯ ವಿವಿಧ ಹಂತದ ಆರೋಗ್ಯ ಅಧಿಕಾರಿಗಳು, ಆಶಾ ಕಾರ್ಯಕರ್ತರು ಗ್ರಾಭದ ಮುಖಂಡರು ಯುವಕರು ಸ್ತ್ರೀಶಕ್ತಿ ಸಂಘದ ಸದಸ್ಯರು ಭಾಗವಹಿಸಿದ್ಧರು.



# ಕಾಶ್ಮೀರದ ಉಗ್ರರನ್ನ ಮೋದಿ ಸರ್ಕಾರ ಧ್ವಂಶ ಮಾಡಲಿ ರೈತ ಸಂಘ ಒತ್ತಾಯ



**ಕೂಡ್ಲಿಗಿ :** ಕಾಶ್ಮೀರದ ಪಹಲ್ಗಾಮ್ ನಲ್ಲಿಭಾರತೀಯರಮೇಲೆಉಗ್ರರು ನಡೆಸಿದ ನರಮೇಧ ಕೃತ್ಯವನ್ನು ಖಂಡಿಸಿ, ಕೇಂದ್ರ ಸರ್ಕಾರ ಉಗ್ರರ ದಮನ ಮಾಡಬೇಕು ಎಂದು ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರುಸೇನೆ ವತಿಯಿಂದ ಶುಕ್ರವಾರ ತಹಸೀಲ್ದಾರ್ ವಿ. ಕೆ.ನೇತ್ರಾವತಿ ಮೂಲಕ ಪ್ರಧಾನಿ ನರೇಂದ್ರ ಮೋದಿಗೆ ಮನವಿ ಸಲ್ಲಿಸಿದರು. ಈ ಪ್ರತಿಭಟನೆಯ ನೇತೃತ್ವದ ವಹಿಸಿದ್ದ ರಾಜ್ಯ ರೈತ ಸಂಘ(ಹುಚ್ಚವನಹಳ್ಳಿ ಮಂಜುನಾಥ ಬಣ)ದ ರಾಜ್ಯ ಪ್ರಧಾನ ಕಾರ್ಯದರ್ಶಿ ದೇವರಮನೆ ಮಹೇಶ್ ಮಾತನಾಡಿ, ಕಾಶ್ಮೀರದ ಪಹಲ್ಗಾಮ್ ನಲ್ಲಿ ಉಗ್ರರು ನಡೆಸಿದ ನರಮೇಧ ಕೃತ್ಯವನ್ನು ರೈತ ಸಂಘ ಹಾಗೂ ಹಸಿರು ಸೇನೆ ಖಂಡಿಸುತ್ತದೆ. ಕೇಂದ್ರ ಸರ್ಕಾರ ಭಯೋತ್ಪಾದಕ ಕೃತ್ಯಗಳನ್ನು ಮಾಡುವ ಸಂಘಟನೆಗಳನ್ನು ದಮನ ಮಾಡಬೇಕು, ಭಾರತ ಸರ್ಕಾರಕ್ಕೆ ರಾಜ್ಯ ರೈತರ ಸಂಪೂರ್ಣ ಬೆಂಬಲ ಇರುತ್ತದೆ ಎಂದು ತಿಳಿಸಿದರು.

ರಾಜ್ಯದ ಶಿವಮೊಗ್ಗದ ಮಂಜುನಾಥ ರಾವ್, ಬೆಂಗಳೂರಿನ ಭರತ್ ಭೂಷಣ್ ಉಗ್ರರ ಗುಂಡಿಗೆ ಬಲಿಯಾದವರು ವಾರದ ಹಿಂದೆಯಷ್ಟೆ ವಿವಾಹವಾಗಿ ಪತ್ನಿಯೊಂದಿಗೆ ಜಮ್ಮು–ಕಾಶ್ಮೀರದ ಪಹಲ್ಗಾಮ್ ಪ್ರವಾಸಕ್ಕೆ ಹೋಗಿದ್ದ ಭಾರತೀಯ ನೌಕಾಪಡೆಯ ಅಧಿಕಾರಿ ವಿನಯ್ ನಾರ್ವಾಲ್ ಭಯೋತ್ಪಾದಕರ ಗುಂಡಿಗೆ ಬಲಿಯಾಗಿದ್ದಾರೆ.

ಇದು ಅತ್ಯಂತ ದುರದೃಷ್ಟಕರ. ಇದರ ಹಿಂದೆ ಪಾಕಿಸ್ತಾನದ ಹೇಯ ಕೃತ್ಯ ಹಾಗೂ ಚೀನಾ ಕುತಂತ್ರವೂ ಅಡಗಿದೆ. ಈ ಹೇಡಿ ಕೃತ್ಯವನ್ನು ಈ ಭಾಗದ ಕರ್ನಾಟಕ ರೈತ ಸಂಘ ಹಾಗೂ ಹಸಿರು ಸೇನೆ ಹುಚ್ಚವ್ವನಹಳ್ಳಿ ಮಂಜುನಾಥ ಬಣ ಖಂಡಿಸುತ್ತದೆ ಎಂದ ಅವರು, ನರಮೇದ ಕೃತ್ಯವನ್ನು ಎಸಗಿದ ಉಗ್ರರಿಗೆಸಹಕರಿಸಿದಸ್ಥಳೀಯರಿಗೆ ಭಾರತೀಯಸೇನೆಗುಂಡಿನಿಂದಲೇ ಉತ್ತರ ನೀಡಬೇಕು ಎಂದು ಒತ್ತಾಯಿಸಿದರು. ಭಾರತದ ಸಾರ್ವಭೌಮತ್ವಕ್ಕೆ, ಅಖಂಡತೆಗೆ ಧಕ್ಕೆಯಾದರೆ ಭಾರತ ಸರ್ಕಾರಕ್ಕೆ ಈ ಭಾಗದ ರೈತರು ಸಂಪೂರ್ಣ ಸಹಕಾರ ಹಾಗೂ ಬೆಂಬಲ ನೀಡುತ್ತೇವೆ ಎಂದು ಅವರು ಗೃಹ ಸಚಿವ ಅಮಿತ್ ಷಾ ಹಾಗೂ ಪ್ರಧಾನಿ ನರೇಂದ್ರ ಮೋದಿಗೆ ಮನವಿ ಪತ್ರದಲ್ಲಿ ಮನವಿ ಮಾಡಿದ್ದಾರೆ. ತಹಸೀಲ್ದಾರ್ ವಿ. ಕೆ.ನೇತ್ರಾವತಿ ಮನವಿ ಸ್ವೀಕಾರ ಮಾಡಿದರು.

ರಾಜ್ಯ ರೈತ ಸಂಘ ಜಿಲ್ಲಾಧ್ಯಕ್ಷ ಬಣಕಾರ ಬಸವರಾಜ, ಕೂಡ್ಲಿಗಿ ತಾಲೂಕು ಅಧ್ಯಕ್ಷ ಬಾಣದ ಮಾರುತಿ, ಹೊಸಪೇಟೆ ತಾಲೂಕು ಅಧ್ಯಕ್ಷ ಬಿ. ಶೇಕಪ್ಪ, ಸಂಡೂರು ತಾಲೂಕು ಕಾರ್ಯದರ್ಶಿ ವಿ.ಎಸ್.ಶಂಕರ್, ಎಂ.ಅಂಜಿನಪ್ಪ, ನಂದಿ ಜಂಬಣ್ಣ, ಎಂ.ನಾಗರಾಜ, ಬಿ.ಮೂಕಪ್ಪ, ಸಣ್ಣ ಗಾಳೆಪ್ಪ ಸೇರಿದಂತೆ ಅನೇಕರು ಇದ್ದರು.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State